| ಸಾರಿಗೆ | ಸಾರಿಗೆ ಹಾಗೂ ಇತರೆ ಸಾರಿಗೆ ಕಾರ್ಪೋರೇಷನ್ ಕೂಡಿ | 14 |
| ಮಹಿಳೆ ಮತ್ತು ಮಕ್ಕಳ ಕಲ್ಯಾಣ | ಮಹಿಳೆ ಮತ್ತು ಮಕ್ಕಳ ಕಲ್ಯಾಣ | 3 |
| ಒಟ್ಟು | | 684 |


# ಅಧ್ಯಾಯ –3ಎ


## ಕರೆಕೇಂದ್ರದ ವರದಿ

*ಈ ಮಾಹೆಯಲ್ಲಿ ಕರೆಕೇಂದ್ರದಲ್ಲಿ  ಒಟ್ಟು ೨೬೫೭೩ ಕರೆಗಳು ದಾಖಲಾಗಿದೆ., ಕರೆಗಳ ವರ್ಗ ಈ ಕೆಳಕಂಡಂತೆ ಇದೆ. ಒಳ ಕರೆಗಳ ಬಗ್ಗೆಯು ಮಾಹಿತಿಗಾಗಿ, ಅವಹಾಲು, ದೂರು, ಕುಂದುಕೊರತೆ, ಸಲಹೆ ಇತರೆ ಬಗ್ಗೆಯದಾಗಿದೆ.*




<u>ಸಕಾಲ ಕಾರ್ಯ ವೈಖರಿ ಬಗ್ಗೆ ನಾಗರಿಕರ ಸ್ಪಂದನೆ:</u> ಒಟ್ಟಾರೆ ಸಕಾಲ ಸೇವೆಗಳನ್ನು ಪಡೆದುಕೊಳ್ಳುವಲಿ ೯೦% ನಾಗರಿಕರು ಸಂತೃಪ್ತರಾಗಿದ್ದು, ೬% ನಾಗರಿಕರು ಅಸಂತೃಪ್ತರಾಗಿದ್ದಾರೆ ಇದಕ್ಕೆ ಕಾರಣಗಳು ಆಧಿಕಾರಿಗಳು ಸರಿಯಾಗಿ ಸ್ಪಂದಿಸದೆ ಇರುವುದು, ಸಕಾಲೇತರ ಸೇವೆಗಳು, ದಾಖಲಾತಿ ಪಟ್ಟಿ/ಶುಲ್ಕ ಇತರೆ ಸೂಚನಾ ಫಲಕದಲ್ಲಿ ಅಥವಾ ನಿಗದಿತ ನಮೂನೆಯಲ್ಲಿ ನೀಡದೆ ಇರುವುದು, ಈ ಬಗ್ಗೆ ಮಂಡಳಿಯು ಸೂಕ್ತ ಕ್ರಮಗಳನ್ನು ಕೈಗೊಳ್ಳಲಿದ್ದು,  ನಾಗರಿಕರ ಬೇಡಿಕೆಯನ್ನು ಮನಗಂಡು ಉತ್ಕೃಷ್ಟ ಗುಣಮಟ್ಟದ ಸೇವೆಯನ್ನು ನೀಡುವ ಧ್ಯೇಯದೊಂದಿಗೆ ಮಂಡಳಿಯ ಕಾರ್ಯವೈಖರಿಯನ್ನು ದಿನೇ ದಿನೇ ಸರಳ/ಉತ್ತಮಪಡಿಸುತ್ತಲಿದೆ.






***ಜಿಲ್ಲಾವಾರು ಸ್ವೀಕೃತವಾಗಿರುವ ಕರೆಗಳ ಸಂಖ್ಯೆ***

*೧೦ ಗರಿಷ್ಠ ಹಾಗೂ ೧೦ ಕನಿಷ್ಠ ಸಂಖ್ಯೆಯ ಕರೆಗಳು ಸ್ವೀಕೃತವಾಗಿರುವ ಪಟ್ಟಿ :-*

| ಜಿಲ್ಲೆಗಳು | ಗರಿಷ್ಠ ಕರೆಗಳ ಸಂಖ್ಯೆ | ಜಿಲ್ಲೆಗಳು | ಕನಿಷ್ಠ ಕರೆಗಳ ಸಂಖ್ಯೆ |
|---|---|---|---|
| ಬೆಂಗಳೂರು | 15892 | ಮಂಗಳೂರು | 43 |
| ಬಾಗಲಕೋಟೆ | 1761 | ಯಾದಗಿರಿ | 48 |
| ದಾವಣಗೆರೆ | 1064 | ಕೊಡಗು | 52 |
| ಬೆಳಗಾಂ | 841 | ಉತ್ತರ ಕನ್ನಡ | 116 |
| ಬಳ್ಳಾರಿ | 510 | ಉಡುಪಿ | 126 |
| ಬಿಜಾಪುರ | 468 | ಧಾರವಾಡ | 155 |
| ಬೆಂಗಳೂರು ಗ್ರಾಮಾಂತರ | 437 | ಚಿಕ್ಕಮಗಳೂರು | 188 |
| ಚಿತ್ರದುರ್ಗ | 416 | ಚಾಮರಾಜನಗರ | 194 |
| ಗುಲ್ಬರ್ಗ | 393 | ರಾಮನಗರ | 216 |
| ರಾಯಚೂರು | 385 | ಹಾವೇರಿ | 228 |

## ಸಕಾಲ /ಸಕಾಲೇತರ ದೂರುಗಳು :

*ಸಕಾಲದಡಿ ಒಟ್ಟಾರೆ ಈವರೆಗೆ ೨೮೬೨ ದೂರುಗಳು ಸ್ವೀಕೃತವಾಗಿದ್ದು ೨೬೬೩ ದೂರುಗಳನ್ನು ಪರಿಹರಿಸಲಾಗಿದ್ದು, ೧೮೬ ದೂರುಗಳು ಪರಿಹಾರದ ಹಂತದಲ್ಲಿದೆ, ೫೩ ದೂರುಗಳು ವಿವಿಧ ಕಾರಣಗಳಿಂದ ತಿರಸ್ಕೃತವಾಗಿವೆ. ಈ ಮಾಹೆಯಲ್ಲಿ ಒಟ್ಟಾರೆ ೧೫೮ ದೂರುಗಳು ಸ್ವೀಕೃತವಾಗಿದೆ.*

*ಒಟ್ಟು ೩೦೭೫ ಸಕಾಲೇತರ ದೂರುಗಳು ದಾಖಲಾಗಿದ್ದು ೨೭೪೦ ದೂರುಗಳು ಪರಿಹರಿಸಲ್ಪಟ್ಟಿದ್ದು ೨೫೬ ದೂರುಗಳು ಪರಿಹಾರದ ಹಂತದಲ್ಲಿದೆ.*

| | ಸಕಾಲ ದೂರುಗಳು | | | | ಸಕಾಲೇತರ ದೂರುಗಳು | | | |
|---|---|---|---|---|---|---|---|---|
| ಮಾಹೆ | ಪರಿಹಾರದ ಹಂತ ದಲ್ಲಿರುವ ದೂರುಗಳು | ತಿರಸ್ಕತ ದೂರುಗಳು | ಪರಿಹರಿ ಸಲ್ಪಟ್ಟ ದೂರುಗಳು | ಒಟ್ಟು | ಪರಿಹಾರದ ಹಂತ ದಲ್ಲಿರುವ ದೂರುಗಳು | ತಿರಸ್ಕತ ದೂರುಗಳು | ಪರಿಹರಿ ಸಲ್ಪಟ್ಟ ದೂರು ಗಳು | ಒಟ್ಟು |
| ಮಾಚ್ 2013 | | | 25 | 25 | | | 97 | 97 |
| ಏಪ್ರಿಲ್ 2012 | | | | | | 1 | 18 | 19 |
| ಮೇ 2012 | | | 47 | 47 | | 1 | 183 | 184 |
| ಜೂನ್ 2012 | | | 66 | 66 | | | 125 | 125 |
| ಜುಲೈ 2012 | | | 39 | 39 | 1 | | 149 | 150 |
| ಆಗಸ್ಟ್ 2012 | | | 52 | 52 | | | 81 | 81 |
| ಸೆಪ್ಟಂಬರ್ 2012 | | 6 | 81 | 87 | | | 124 | 124 |
| ಅಕ್ಟೋಬರ್ 2012 | | 1 | 41 | 42 | | | 157 | 157 |
| ನವೆಂಬರ್ 2012 | | | 46 | 46 | 2 | | 182 | 184 |
| ಡಿಸೆಂಬರ್ 2012 | | | 78 | 78 | 1 | 5 | 255 | 261 |
| ಜನವರಿ 2013 | | 2 | 143 | 145 | 7 | 3 | 189 | 199 |
| ಫೆಬ್ರವರಿ 2013 | | 2 | 257 | 259 | 8 | | 151 | 159 |
| ಮಾರ್ಚ್ 2013 | | 23 | 406 | 429 | 10 | | 277 | 287 |
| ಏಪ್ರಿಲ್ 2013 | | 7 | 355 | 362 | 14 | 1 | 204 | 219 |
| ಮೇ 2013 | | 5 | 310 | 315 | 14 | 3 | 161 | 178 |
| ಜೂನ್ 2013 | | 4 | 121 | 125 | 13 | | 113 | 126 |
| ಜುಲೈ 2013 | | | 134 | 134 | 13 | | 73 | 86 |
| ಆಗಸ್ಟ್ 2013 | | 1 | 106 | 107 | 24 | | 37 | 61 |
| ಸೆಪ್ಟಂಬರ್ 2013 | | | 188 | 188 | 56 | | 72 | 128 |
| ಅಕ್ಟೋಬರ್ 2013 | 43 | | 149 | 192 | 93 | | 54 | 147 |
| ನವೆಂಬರ್ 2013 | 104 | | | 104 | 65 | | 38 | 103 |
| ಒಟ್ಟು | 157 | 51 | 2644 | 2842 | **256** | **14** | **2740** | **3075** |

*ಏಣಿಸಿದಂತೆ ಸಕಾಲೇತರ ದೂರುಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿದೆ, ಇದು ಹೊಸತಾಗಿ ಹೆಚ್ಚು ಹೆಚ್ಚು ಸೇವೆಗಳು ಸಕಾಲದಡಿ ಸೇರ್ಪಡೆಯಾಗುತ್ತಿರುವುದೇ ಕಾರಣವಾಗಿದೆ.*

*ಅಹವಾಲು–೧ ಹಾಗೂ ೨:*

| | ಅಹವಾಲು 1 | | | | ಅಹವಾಲು 2 | | | |
|---|---|---|---|---|---|---|---|---|
| ಜಿಲ್ಲೆ | ಮೊದಲ ಮನವಿ ಸ್ವೀಕೃತಿ ಸಂಖ್ಯೆ | ಮೊದಲ ಮನವಿಯ ಅನುಮೋದನೆ ಸಂಖ್ಯೆ | ಮೊದಲ ಮನವಿಯ ತಿರಸ್ಕೃತ ಸಂಖ್ಯೆ | ಮೊದಲ ಮನವಿಯ ಬಾಕಿ ಸಂಖ್ಯೆ | ಎರಡನೆಯ ಮನವಿ ಸ್ವೀಕೃತಿ ಸಂಖ್ಯೆ | ಎರಡನೆಯ ಮನವಿಯ ಅನುಮೋದನೆ ಸಂಖ್ಯೆ | ಎರಡನೆಯ ಮನವಿಯ ತಿರಸ್ಕೃತ ಸಂಖ್ಯೆ | ಎರಡನೆಯ ಮನವಿಯ ಬಾಕಿ ಸಂಖ್ಯೆ |
| ಬೆಂಗಳೂರು | 157 | 118 | 16 | 23 | 11 | 5 | 2 | 4 |
| ರಾಯಚೂರು | 84 | 33 | 48 | 3 | 3 | 3 | 0 | 0 |
| ಗುಲ್ಬರ್ಗಾ | 36 | 11 | 22 | 3 | 12 | 9 | 3 | 0 |
| ದಾವಣಗೆರೆ | 34 | 0 | 31 | 3 | 0 | 0 | 0 | 0 |
| ಬಳ್ಳಾರಿ | 31 | 11 | 20 | 0 | 5 | 0 | 0 | 5 |
| ತುಮಕೂರು | 23 | 8 | 8 | 7 | 0 | 0 | 0 | 0 |
| ಬೀದರ್ | 23 | 0 | 16 | 7 | 1 | 0 | 0 | 1 |
| ಮೈಸೂರು | 21 | 10 | 9 | 2 | 0 | 0 | 0 | 0 |
| ಬೆಳಗಾಂ | 17 | 10 | 4 | 3 | 0 | 0 | 0 | 0 |
| ಕೋಲಾರ | 16 | 7 | 5 | 4 | 3 | 0 | 3 | 0 |
| ಬಾಗಲಕೋಟೆ | 15 | 1 | 1 | 13 | 0 | 0 | 0 | 0 |
| ಬಿಜಾಪುರ | 10 | 3 | 6 | 1 | 1 | 0 | 1 | 0 |
| ಮಂಡ್ಯ | 10 | 2 | 6 | 2 | 1 | 0 | 0 | 1 |
| ಚಿತ್ರದುರ್ಗ | 9 | 2 | 4 | 3 | 0 | 0 | 0 | 0 |
| ಗದಗ | 8 | 5 | 3 | 0 | 0 | 0 | 0 | 0 |
| ಚಾಮರಾಜ ನಗರ | 8 | 5 | 2 | 1 | 0 | 0 | 0 | 0 |
| ರಾಮನಗರ | 8 | 3 | 2 | 3 | 0 | 0 | 0 | 0 |
| ಉಡುಪಿ | 6 | 3 | 3 | 0 | 1 | 1 | 0 | 0 |
| ಉತ್ತರ ಕನ್ನಡ | 6 | 3 | 2 | 1 | 1 | 0 | 1 | 0 |
| ಚಿಕ್ಕಮಗಳೂರು | 6 | 0 | 1 | 5 | 1 | 1 | 0 | 0 |
| ಧಾರವಾಡ | 6 | 1 | 4 | 1 | 0 | 0 | 0 | 0 |
| ಹಾವೇರಿ | 6 | 2 | 4 | 0 | 0 | 0 | 0 | 0 |
| ಹಾಸನ | 6 | 2 | 4 | 0 | 0 | 0 | 0 | 0 |
| ಚಿಕ್ಕಬಳ್ಳಾಪುರ | 5 | 0 | 4 | 1 | 0 | 0 | 0 | 0 |
| ಬೆಂಗಳೂರು | 5 | 2 | 0 | 3 | 0 | 0 | 0 | 0 |
| ಶಿವಮೊಗ್ಗ | 5 | 3 | 0 | 2 | 0 | 0 | 0 | 0 |
| ಯಾದಗಿರಿ | 4 | 2 | 2 | 0 | 1 | 0 | 1 | 0 |
| ಕೊಪ್ಪಳ | 2 | 0 | 2 | 0 | 0 | 0 | 0 | 0 |
| ಕೊಡಗು | 1 | 0 | 1 | 0 | 0 | 0 | 0 | 0 |
| ದಕ್ಷಿಣ ಕನ್ನಡ | 1 | 1 | 0 | 0 | 0 | 0 | 0 | 0 |
| ಒಟ್ಟು: | 569 | 248 | 230 | 91 | 41 | 19 | 11 | 11 |

*ಪರಿಹಾರ ಧನ:* *ಇದುವರೆಗೂ ೨೮೬ ನಾಗರಿಕರಿಗೆ ಪರಿಹಾರ ಧನವನ್ನು ನೀಡಲಾಗಿದೆ. ಜಿಲ್ಲಾವಾರು ಪರಿಹಾರ ಧನವನ್ನು ಪಡೆದವರ ಸಂಕ್ಷಿಪ್ತ ಪಟ್ಟಿ*

| ಜಿಲ್ಲೆಗಳು | ಪರಿಹಾರ ಧನ ಪಡೆದವರ ಸಂಖ್ಯೆ |
|---|---|
| ಬೆಂಗಳೂರು | 109 |
| ರಾಯಚೂರು | 25 |
| ಗುಲ್ಬರ್ಗಾ | 21 |
| ಬಳ್ಳಾರಿ | 18 |
| ಮೈಸೂರು | 15 |
| ತುಮಕೂರು | 14 |
| ದಾವಣಗೆರೆ | 14 |
| ಕೋಲಾರ | 12 |
| ಬೀದರ್ | 10 |
| ಬೆಳಗಾಂ | 8 |
| ಬಿಜಾಪುರ | 6 |
| ಮಂಡ್ಯ | 5 |
| ರಾಮನಗರ | 5 |
| ಹಾವೇರಿ | 4 |
| ಗದಗ | 3 |
| ಚಿತ್ರದುರ್ಗ | 3 |
| ಯಾದಗಿರಿ | 3 |
| ಚಾಮರಾಜ ನಗರ | 2 |
| ಧಾರವಾಡ | 2 |
| ಶಿವಮೊಗ್ಗ | 2 |
| ಹಾಸನ | 2 |
| ಉಡುಪಿ | 1 |
| ಚಿಕ್ಕಮಗಳೂರು | 1 |
| ಬಾಗಲಕೋಟೆ | 1 |
| ಒಟ್ಟು | 286 |

# ೫. ಮರುಸ್ಪಂದನೆ

| ನಾಗರಿಕರ ಮರುಸ್ಪಂದನೆ | |
|---|---|
| **ಕಲ್ಪಶ್ರೀ, ಕಲ್ಪನೆ,<br>ಕುಲಶೇಖರ್ ,<br>ಮಂಗಳೂರು**<br><br>*"ಕುಂದಾಪುರದಿಂದ ಮಂಗಳೂರಿಗೆ ಅಟ್ಲಾಸ್ (ಸರ್ವೆ ಇಲಾಖೆಯ ಸೇವೆ) ತೆಗೆದುಕೊಳ್ಳಲು ಬಂದೆ. ಮತ್ತೆ 7 ದಿನದ ನಂತರ ಅಲ್ಲಿಂದ ಬರಬೇಕು, ಶ್ರೀಮಂತ ಜನ ಹೆಚ್ಚಿನ ದುಡ್ಡು ಕೊಟ್ಟು ಸರಕಾರಿ ಕಛೇರಿಗಳಲ್ಲಿ ಕೆಲಸ ಮಾಡಿಕೊಳ್ಳುತ್ತಾರೆ' ಬಡಜನರಿಗೆ ಸಕಾಲದಿಂದ ನೆರವಾಗಿದೆ ನಿರ್ದಿಷ್ಟ ಸಮಯದಲ್ಲಿ ಸೇವೆ ದೊರಕುತ್ತದೆ"* | **ಕಲ್ಯಾಣಿ, ತಂದೆ ಹಣಮಂತರಾಯ ಚೇಂಗಟಿ,<br>ಗ್ರಾಮೀಣಾಭಿವೃದ್ಧಿ ಇಲಾಖೆಯ ಸೇವೆಗಾಗಿ ಕೋರಿಕೆ ಸಲ್ಲಿಸಿದ್ದರು,<br>PR0011000848129,<br>ಗುಲ್ಬರ್ಗ**<br><br>*"ಕರ ನಿರ್ಧರಣೆ ಪಟ್ಟಿಗಾಗಿ ಅರ್ಜಿ ಹಾಕಿದ್ದೆ, ಹೆಚ್ಚಿನ ಹಣ ಪಾವತಿ ಮಧ್ಯವರ್ತಿಗಳಿಗೆ ಪಾವತಿ ಮಾಡದೆ ಸೇವೆ ದೊರಕಿತು, ಈಗ ಮಧ್ಯವರ್ತಿಗಳ ಹಾವಳಿ ಕಡಿಮೆಯಾಗಿದೆ, ಇದು ನಾಗರಿಕರಿಗೆ ಅನುಕೂಲ ವಾತಾವರಣವಾಗಿದೆ" ಎಂದು ತಿಳಿಸಿದರು.* |
| **ಶ್ರೀಕಾಂತ್ ಹನಮಂತ ಹರಿಜನ,<br>ಬಾದಮಿ,<br>RD0038110008607<br>ಆದಾಯ ಪ್ರಮಾಣ ಪತ್ರಕ್ಕಾಗಿ ಕೋರಿದ್ದರು**<br><br>*"ನಿಗದಿತ ಸಮಯದಲ್ಲಿ ಕೋರಿದ್ದ ಸೇವೆ ದೊರಕಿತು, ಅಂತರ್‌ಜಾಲದಲ್ಲಿ ಸಕಾಲ ಬಗ್ಗೆ ತಿಳಿದುಕೊಂಡೆ" ಎಂದು ತಿಳಿಸಿದ್ದಾರೆ* | **SS0990000417303,<br>ಬಸವಲಿಂಗಪ್ಪ, ಸಿರಾ,<br>ಸರ್ವೇ ಇಲಾಖೆ,**<br>*"ಆಕಾರ್ ಬಂದ್‌ಗಾಗಿ ಕೋರಿದ್ದೆ, ಸೇವೆಗೆ ಸಂಬಂಧಿತ ಹಣವನ್ನು ಬ್ಯಾಂಕಿನಲ್ಲಿ ಕಟ್ಟುವ ಬದಲು ತಾಲ್ಲೂಕು ಕಛೇರಿಯಲ್ಲೇ ಕಟ್ಟುವ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೆ ಹಾಗೂ ವ್ಯರ್ಥ ಸಮಯ ವ್ಯಯವಾಗುವುದನ್ನು ಉಳಿಸಬಹುದು"* |
| **ಲತಾ,<br>ಬಾಗಲಕೋಟೆ,**<br><br>*ಕಂದಾಯ ಇಲಾಖೆಯ ಸೇವೆಗಳಿಗೆ ಸಂಬಂಧಿತ ಮಾಹಿತಿಗಾಗೆ ಕರೆಕೇಂದ್ರಕ್ಕೆ ಕರೆ ಮಾಡಿರುವುದು<br>"ಸಕಾಲದ ಬಗ್ಗೆ ನನಗೆ ದಿನಪತ್ರಿಕೆಯಿಂದ ತಿಳಿಯಿತು, ಸಕಾಲದ ಸೇವೆಗಳ ಬಗ್ಗೆ ಮಾಹಿತಿಗಾಗಿ ಕರೆ ಮಾಡಿದೆ ತತ್ ಕ್ಷಣ ಮಾಹಿತಿ ದೊರಕಿತು. ಕೆಲವೊಂದು ಸೇವೆಗಳ ಕಾಲಮಿತಿಯನ್ನು ಇಳಿಸಬೇಕಿದೆ" ಎಂಬುದು ಇವರ ಅಭಿಪ್ರಾಯ.* | **ss0990000393919,<br>ಚಿಕ್ಕೀರಪ್ಪ,<br>ಕೊರಟಗೆರೆ, ತುಮಕೂರು<br>ಭೂಮಾಪನ ಇಲಾಖೆಗೆ ಸಂಬಂಧಿತ ಸೇವೆ,**<br>*"ಆರ್.ಆರ್.ಪಕ್ಕಾಗಾಗಿ ಕೋರಿದ್ದೆ ಸಕಾಲದಲ್ಲಿ ಸೇವೆಯು ಸಮಯ ನಿಗದಿಪಡಿಸಿರುವುದರಿಂದ ಪ್ರತಿದಿನ ಕಛೇರಿಗೆ ಅಲೆಯುವುದು ತಪ್ಪಿದೆ. ಜಿ ಎಸ್ ಸಿ ಸ್ವೀಕೃತಿಯಲ್ಲಿ ನಮೂದಿಸಿರುವ/ತಿಳಿಸಿರುವ ಸಮಯದಲ್ಲಿ ಬಂದು ಸೇವೆ ಪಡೆಯಲು ಸಾಧ್ಯವಾಗಿದೆ. ನಾಗರಿಕರಿಗೆ ಸಮಯ ಹಾಗೂ ಹಣ ವ್ಯರ್ಥವಾಗುವುದು ತಪ್ಪಿರುವುದು ಸಂತಸದ ವಿಷಯವೆ ಸರಿ"* |
| | |

***ಸುನಿತ,***
***ಮಂಡ್ಯ,***
***ಕಂದಾಯ ಇಲಾಖೆಯ ಜಾತಿ ಪ್ರಮಾಣ ಪತ್ರದ ಸೇವೆಗಾಗಿ ಕೋರಿದ್ದರು.***
*"ಸಕಾಲದ ಬಗ್ಗೆ ದಿನ ಪತ್ರಿಕೆಗಳಿಂದ ತಿಳಿದಿದೆ, ಸಕಾಲ ಕರೆಕೇಂದ್ರಕ್ಕೆ ಸೇವೆಯನ್ನು ದೊರಕಿಸಿಕೊಳ್ಳುವುದು ಹೇಗೆ ಎಂದು ತಿಳಿದುಕೊಂಡೆ ಹಾಗೂ ಕೋರಿದ ಸೇವೆಯನ್ನು ಪಡೆದೆ, ಕೇವಲ ಒಂದು ಕರೆಯಿಂದ ನನಗೆ ಬೇಕಾದ ಮಾಹಿತಿಯನ್ನು ಪಡೆದಿರುವುದು ಸಂತೋಷವನ್ನು ತಂದಿದೆ. ಗ್ರಾಮೀಣ ಜನತೆಗೂ ಸಕಾಲ ಅಧಿನಿಯಮ ತುಂಬಾ ಸಹಕಾರಿಯಾಗಿದೆ. ಹೆಚ್ಚು ಹೆಚ್ಚು ಸೇವೆಗಳನ್ನು ಸೇರಿಸುವುದರಿಂದ ನಾಗರಿಕರಿಗೆ ಬಹಳ ಉಪಯೋಗವಾಗುತ್ತದೆ" ಎಂದು ತಿಳಿಸಿದ್ದಾರೆ.*

***ಬಿ ಮಂಜುನಾಥ್ ಬಿನ್ ಬಸವರಾಜಪ್ಪ***
***ಹೆಚ್,ಕಡೂರು,***
***ಪುರಸಭೆ,***
*ಅರ್ಜಿದಾರರು ವಾಣಿಜ್ಯ ಪರವಾನಿಗೆಗಾಗಿ ಅರ್ಜಿ ಸಲ್ಲಿಸಿದ್ದರು, "ಸಕಾಲದಲ್ಲಿ ಸೇವೆ ದೊರಕಿತು, ಆದರೆ ಕಛೇರಿಯ ಅಧಿಕಾರಿಗಳು ಹಣ ಕೊಡದಿದ್ದರೆ ಅನವಶ್ಯಕ ದಾಖಲಾತಿಗಳನ್ನು ಕೇಳುತ್ತಾರೆ ಹಾಗೂ ಹಣ ಕೊಡದಿದ್ದರೆ ಸೇವೆಯೇ ನೀಡುವುದಿಲ್ಲ, ಅಧಿಕಾರಗಳ ಲಂಚಗುಳಿತನಕ್ಕೆ ಕಡಿವಾಣ ಹಾಕಿ ಸಾರ್ವಜನಿಕರ ಜೀವನದಲ್ಲಿ ನೆಮ್ಮದಿ ತನ್ನಿ" ಎಂದು ತಿಳಿಸಿದ್ದಾರೆ.*

***ರುದ್ರಪ್ಪ,***
***ಗದಗ,***
*ಕಂದಾಯ ಇಲಾಖೆಯ ಸಂಧ್ಯಾ ಸುರಕ್ಷೆ ಸೇವೆಗಾಗಿ ಕೋರಿದ್ದರು, "ಸಕಾಲದ ಬಗ್ಗೆ ನನಗೆ ತಾಲ್ಲೂಕು ಕಛೇರಿಯಿಂದ ತಿಳಿದು ಬಂದಿತು. ಕರೆ ಕೇಂದ್ರಕ್ಕೆ ಕರೆ ಮಾಡಿದೆ ತತ್ ಕ್ಷಣ ಮಾಹಿತಿ ದೊರಕಿತು ಹಾಗೆಯೇ ಸೇವೆಯು ದೊರಕಿತು,ಸಕಾಲ ಅಧಿನಿಯಮದ ಅಳವಡಿಕೆಯಿಂದಷ್ಟೆ ಸೇವೆಗಳು ತ್ವರಿತವಾಗಿ ಸಿಗುತ್ತಿವೆ, ಆದರೆ ಅಧಿಕಾರಿಗಳ ಕಾರ್ಯ ನಿಷ್ಟೆಯಲ್ಲಿ ಬೆಳವಣಿಗೆಯಾಗಬೇಕಿದೆ, ಹಾಗೆಯೇ ನಿಗದಿತ ಕಾಲಮಿತಿಯನ್ನು ಕಡಿತಗೊಳಿಸಬೇಕಿದೆ"*

***rd0990000327663,***
***ವೆಂಕಟೇಶ್ ಮೂರ್ತಿ,***
***ಕೊರಟಗೆರೆ***
*"ಭೂಮಾಪನ ಇಲಾಖೆಯ ಸೇವೆಗಾಗಿ ಕೋರಿದ್ದೆ.ಸಕಾಲದಲ್ಲಿ ಸೇವೆ ಪಡೆಯಲು ಚಲನ್ ಕಡ್ಡಾಯವಾಗಿದೆ.ಆದರೆ 6–00 ರೂ ಚಲನ್ ಕಟ್ಟುವುದಕ್ಕೆ 40–00 ರೂ ಆಟೋಗೆ ದುಡ್ಡು ಕೊಡಬೇಕಾಗಿದೆ. ಅದಕ್ಕೆ ಚಲನ್ ಕಟ್ಟುವ ವ್ಯವಸ್ಥೆ ಕಛೇರಿಯಲ್ಲಿ ಮಾಡಿದರೆ ರೈತರಿಗೆ ಒಳ್ಳೆಯದು"*

***L20990000464156***
***ಲತಾ ಯು ಸಿ,***
***ಚಿಕ್ಕಮಗಳೂರು,***

*ಖಾತಾ ಉದ್ಧೃತಕ್ಕಾಗಿ ಕಂದಾಯ ಇಲಾಖೆ ಪುರಸಭೆಯಲ್ಲಿ ಕೋರಿಕೆ ಸಲ್ಲಿಸಿದ್ದರು "ಇದುವರೆಗೂ ಕೋರಿದ ಸೇವೆ ನೀಡಿಲ್ಲಾ, ಅನವಶ್ಯಕ ದಾಖಲಾತಿಗಳನ್ನು ಕೇಳುತ್ತಿದ್ದಾರೆ, ಸಕಾಲದ ಬಗ್ಗೆ ನನಗೆ ಗೊತ್ತಿಲ್ಲಾ," ಮಂಡಳಿಯ ಸಿಬ್ಬಂದಿಯು ಸಕಾಲದ ಬಗ್ಗೆ ವಿವರಣೆ ನೀಡಿತು ಹಾಗೂ ಮುಂದಿನ ಮಾಹಿತಿಗಾಗಿ ಕರೆಕೇಂದ್ರದ ಸಂಖ್ಯೆಯನ್ನು ನೀಡಿದೆವು.*

***ಮರಿಯಪ್ಪ,***
***ಸಿಂದನೂರು***
***ರಾಯಚೂರು***

*ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ "ಕೌಶಲ್ಯ ರಹಿತ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಲು ಕೋರಿದ್ದರು ಜಿಎಸ್‌ಸಿ ಸ್ವೀಕೃತಿಯನ್ನು ನೀಡಿಲ್ಲ, ಪಿಡಿಒ ರವರು ಸೇವೆ ನೀಡುತ್ತಿಲ್ಲಾ, ಕರೆ ಕೆಂದ್ರಕ್ಕೆ ದೂರು ನೀಡಲು ಮಂಡಳಿಯವರು ತಿಳಿಸಿದರು, ಸಕಾಲ ಸಹಾಯ ಕೇಂದ್ರವು ನಮ್ಮ ಊರಲ್ಲಿ ಇದೆ" ಸಾರ್ವಜನಿಕರಿಗೆ ಸಕಾಲ ಅಧಿನಿಯಮವನ್ನು ಅನುಷ್ಟಾನಗೊಳಿಸಿರುವ ಸರಕಾರದ ಕ್ರಮವನ್ನು ನಾಗರಿಕರು ಪ್ರಶಂಸಿದ್ದಾರೆ.*

***ಭೀಮಮ್ಮ ಹನುಮಂತಪ್ಪ,***

| | |
|---|---|
| ***ಸಿಂದನೂರು, ರಾಯಚೂರು,***<br><br>*ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಕರನಿರ್ಧರಣೆ ಪಟ್ಟಿಯ ತಿದ್ದುಪಡಿಗಾಗಿ ಕೋರಿದ್ದರು, (ಸ್ವೀಕೃತಿಯನ್ನು ಕೂಡ ನೀಡುತ್ತಿಲ್ಲಾ) "ಪಿಡಿಒರವರು ಸೇವೆ ನೀಡದೆ ಸತಾಯಿಸುತ್ತಿದ್ದಾರೆ, ಕ್ರಮ ಕೈಗೊಳ್ಳಿ,, ಅರ್ಜಿಯು ಅನುಮೋದನೆಗೊಂಡಿದೆ ಎಂದು ತಿಳಿದುಬಂದಿದೆ, ಮಧ್ಯವರ್ತಿಗಳ ಹಾವಳಿಯು ಇನ್ನೂ ಕಡಿಮೆಯಾಗಬೇಕಿದೆ, ಸಹಾಯ ಕೇಂದ್ರ ಸ್ಥಾಪಿಸಿರುವುದು ಮಂಡಳಿಯ ಉತ್ತಮ ನಡವಳಿಕೆಯಾಗಿದೆ, ಸಕಾಲವನ್ನು ಸಾರ್ವಜನಿಕರಿಗೆ ನೀಡಿದ್ದಕ್ಕೆ ಸರಕಾರಕ್ಕೆ ನಮ್ಮ ಅಭಿನಂದನೆಗಳು"* | ***ಹಸೀನ ಪರ್ವಿನ್,***<br>***ಹೊಳಲ್ ಕೆರೆ,***<br>***ಚಿತ್ರದುರ್ಗ***<br>*ಚಿತ್ರದುರ್ಗ, ತಾಲ್ಲೂಕು ಪಂಚಯತ್ ಸೇವೆ, "ನೀರಿ ಸಂಪರ್ಕಕ್ಕೆ ಅನುಮೋದನೆ ಸೇವೆಯನ್ನು ಕೋರಿದ್ದೆ, 3 ಬಾರಿ ಕಚೇರಿಗೆ ಭೇಟಿ ಮಾಡಿದ್ದೆ ಆದರೆ ಪ್ರಯೋಜನವಾಗಿಲ್ಲ, ಅಧಿಕಾರಿಯು ಕಚೇರಿಯಲ್ಲಿರಲ್ಲಿಲ್ಲ, ಸೇವೆ ಇನ್ನೂ ದೊರೆತಿಲ್ಲ, ಸಕಾಲ ಕರೆ ಕೇಂದ್ರ ಕರೆ ಮಾಡಿ ದೂರು ನೀಡಲಿದ್ದೇನೆ"* |
| ***ಸಣ್ಣ ಕೊಟ್ರಪ್ಪ,***<br>***ಬಳ್ಳಾರಿ,***<br>***ಕಂದಾಯ ಇಲಾಖೆಯ ಸೇವೆ.***<br>*"ಸಕಾಲದ ಬಗ್ಗೆ ಮಾಧ್ಯಮಗಳ ಮೂಲಕ ತಿಳಿಯಿತು, ಸೇವೆ ದೊರೆತಿಲ್ಲಾ ಖಾತೆ ಬದಲಾವಣೆಗಾಗಿ ಕೋರಿದ್ದೆ ಮಾಡಿಕೊಡುತ್ತಿಲ್ಲಾ, ಅಧಿಕಾರಿಗಳ ವರ್ತನೆಯು ಒರಟಾಗಿದೆ, ಸೂಕ್ತ ಕ್ರಮ ಕೈಗೊಳ್ಳಿ, ಸರಿಯದ ಮಾಹಿತಿ ಸಹ ನೀಡುತ್ತಿಲ್ಲಾ, ಹಲವಾರು ಸೇವೆಗಳ ನಿಗದಿತ ಕಾಲಮಿತಿಯನ್ನು ಇಳಿಸುವ ಅವಶ್ಯಕತೆಯಿದೆ"* | ***CT**0010002200567*<br>***ಮದೀನ್,***<br>***ದೊಡ್ಡಬಳ್ಳಾಪುರ,***<br>***ಬೆಂಗಳೂರು ಗ್ರಾಮಾಂತರ***<br>*ವಾಣಿಜ್ಯ ತೆರಿಗೆ ಇಲಾಖೆಯ ಸೇವೆ, ಕೇವ್ಯಾಟ್ ನೋಂದಣೆಗಾಗಿ ಕೋರಿದ್ದರು, " ಮೂರೇ ದಿನದಲ್ಲಿ ಕೋರಿದ ಸೇವೆ ದೊರಕಿತು, ಅರ್ಜಿ ಸ್ವೀಕೃತಿಯನ್ನು ಸಹ ನೀಡಲಾಗಿತ್ತು, ಈಗ ಸರಕಾರಿ ಸೇವೆಗಳು ಸುಲಭವಾಗಿ ನಾಗರಿಕರಿಗೆ ದೊರಕುತ್ತಿವೆ, ಎಲ್ಲಾ ಸರಕಾರಿ ಸೇವೆಗಳನ್ನು ಸಕಾಲದಡಿ ತರಬೇಕು"* |
| ***ನಾಯಕನ ಹಟ್ಟಿ,***<br>***ಚಳ್ಳಕೆರೆ,***<br>***ಚಿತ್ರದುರ್ಗ***<br>***ಒಳಾಡಳಿತದ (ಪೋಲೀಸ್ ಇಲಾಖೆ) ಸೇವೆ,***<br>*"ಎಫ್ ಐ ಆರ್ ಪ್ರತಿ – ಅರ್ಜಿ ಅನುಮೋದನೆಯಾದರು ಠಾಣೆಯ ಪಿ ಎಸ್ ಐ ರವರು ಎಫ್ ಐ ಆರ್ ಪ್ರತಿ ನೀಡುತ್ತಿಲ್ಲಾ"* | *ನೇತ್ರಾವತಿ,*<br>*PR0011000748520*<br>***ಸೊರಬ***<br>***ಶಿವಮೊಗ್ಗ***<br>*ಇವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಎಸ್ಕಾಂ ನಿರಾಕ್ಷೇಪಣ ಪತ್ರ ಅರ್ಜಿಯನ್ನು ಸಲ್ಲಿಸಿದ್ದು, ಈ ನಾಗರಿಕರಿಗೆ ಸಮಯಬದ್ಧವಾಗಿ ನೀಡಿದ್ದಕ್ಕೆ ಧನ್ಯವಾದಗಳನ್ನು ತಿಳಿಸಿದ್ದಾರೆ.* |
| ***ವೈದ್ಯಕೀಯ ವ್ಯಾಸಂಗ ಸೀಟು ಹಿಂದಿರುಗಿಸುತ್ತಿರುವುದು***<br><br>*ಅರ್ಜಿದಾರರು 2 ಕಾಲೇಜಿನಲ್ಲಿ ವೈದಕೀಯ ಸೀಟಿಗಾಗಿ ಕೋರಿದ್ದರು ಹಾಗೂ ಮುಂಗಡ ಮೊತ್ತವನ್ನು ಪಾವತಿಸಿದ್ದರು, 2 ಕಾಲೇಜುಗಳಲ್ಲೂ ಅವರು ಸೀಟನ್ನು ಪಡೆದರು ಆದುದರಿಂದ 13.8.2013ರಂದು ಒಂದು ಸೀಟ ಶರಣಾಗತಿ ಮಾಡುವೆನೆಂದು* | ***ಶಶಿಧರ್ ಎಂ.***<br>***ಅರ್ಜಿ ಸಂಖ್ಯೆ ಆರ್ ಡಿ**0038924016124*<br>*"ನಾನು ಪಾಂಡವಪುರದಲ್ಲಿ ವಾಸ ಮಾಡುತ್ತಿದ್ದೇನೆ. ನಾನು ಪಾಂಡವಪುರದ ಸಕಾಲ ಕಚೇರಿಯಲ್ಲಿ 21.10.213ರಲ್ಲಿ ಆದಾಯ ಪ್ರಮಾಣ ಪತ್ರಕ್ಕಾಗಿ ಕೋರಿದ್ದೆ, ಮೊದಲು ಅರ್ಜಿ ಕೊಟ್ಟಾಗ ಕಂಪ್ಯೂಟರ್ ಆಪರೇಟರ್ ಎಲ್ಲಾ ದಾಖಲೆಗಳು ಸರಿಯಿದೆ* |

| | |
|---|---|
| ಮುಂಗಡ ಹಣದ ಮರುಪಾವತಿಯನ್ನು ಶಿಕ್ಷಣ ಇಲಾಖೆಯಲ್ಲಿ ಕೋರಿದ್ದರು.  ಕೋರಿದ್ದ 12 ದಿನವಾದರು ಅವರು ನೀಡಿದ್ದ ಮುಂಗಡ ಮೊತ್ತವನ್ನು ಇಲಾಖೆಯು ಹಿಂದಿರುಗಿಸಿರಲಿಲ್ಲ. ಸಕಾಲಕ್ಕೆ ದೂರು ಕೊಟ್ಟ ನಂತರ ಅವರು ತಮ್ಮ ಮೊತ್ತವನ್ನು ಹಿಂಪಡೆದುಕೊಂಡರು, ಇದಕ್ಕೆ ಸಹಕಾರಿಯಾದ ಮಂಡಳಿಗೆ ಅರ್ಜಿದಾರರು ಧನ್ಯವಾದಗಳನ್ನು ಅರ್ಪಿಸಿದರು. | ಎಂದು ತಿಳಿಸಿದರು ಆದರೆ ಸ್ವಲ್ಪ ದಿನಗಳ ನಂತರ ದಾಖಲೆಗಳನ್ನು ಕೊಟ್ಟೇ ಇಲ್ಲ ಎಂದು ಹೇಳಿದರು. ತದ ನಂತರ ನಾನು ಮತ್ತೊಮ್ಮೆ ಸೇವೆಗಾಗಿ ದಾಖಲೆ ಸಮೇತ ಅರ್ಜಿಯನ್ನು ಸಲ್ಲಿಸಿದೆ ಆದರೂ ಕೋರಿದ ಸೇವೆಯನ್ನು ನಿಗದಿತ ಸಮಯದಲ್ಲಿ ನೀಡಲಿಲ್ಲ, ಈಗ ಈ ಪ್ರಮಾಣ ಪತ್ರದ ಅವಶ್ಯಕತೆಯಿಲ್ಲ ನಾನು ನನ್ನ ಅವಕಾಶವನ್ನು ಕಳೆದುಕೊಂಡಿದ್ದೇನೆ, ಸರಕಾರಿ ಜನರ ಈ ನಿರ್ದಕ್ಷಿಣ್ಯ ಪ್ರವೃತ್ತಿಗೆ ಕ್ರಮ ಕೈಗೊಳ್ಳಿ ಬಹುತೇಕ ಸರಕಾರಿ ಅಧಿಕಾರಿಗಳು ನಾಗರಿಕರ ಅವಶ್ಯಕತೆಗಳಿಗೆ ಸರಿಯಾಗಿ ಸ್ಪಂದಿಸುತ್ತಲೆ ಇಲ್ಲ ಎಂಬುದು ಖೇದದ ವಿಷಯವಾಗಿದೆ” |
| **ಶಮ್ಮಿ ಜೆ,**<br>**ವಿರಾಜ್ ಪೇಟ್,**<br>**ಕೊಡಗು,**<br><br>“ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ವಾರ್ಷಿ ಬಡ್ತಿಗಾಗಿ ಕೋರಿದ್ದೆ ಸೇವೆ ದೊರಕಿತು” ಎಂದು ಅರ್ಜಿದಾರರು ಸಂತುಷ್ಟರಾಗಿ ತಿಳಿಸಿದ್ದಾರೆ. | **SS**0990000405296,<br>**ಕೆ.ಸಿ. ರಾಮಯ್ಯ,**<br>**ಮಧುಗಿರಿ,**<br><br>“ಸರ್ವೇ ಇಲಾಖೆಯ ಸೇವೆಗಾಗಿ ಕೋರಿದ್ದೆ ನಮಗೆ ಕೇಸ್‌ವರ್‌ಕರ್ ಕಡೆಯಿಂದ ಸರಿಯಾಗಿ ಸಮಯ ಬದ್ಧವಾಗಿ ಸೇವೆ ಸಿಗುತ್ತಿಲ್ಲ. ಸುಮ್ಮನೆ ವಿಳಂಬವೆಸಗುತ್ತಿದ್ದಾರೆ, ಸೂಕ್ತ ಕ್ರಮ ಕೈಗೊಳ್ಳಿ" |
| **ಶರಣಪ್ಪ ಬಸಪ್ಪ,**<br>**ಗುಲ್ಬರ್ಗ ಜಿಲ್ಲೆಯ**<br>**ಚಿತ್ತಾಪುರ ತಾಲ್ಲೂಕು**<br>**ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಸೇವೆಗಾಗಿ ಕೋರಿದ್ದರು,**<br>" ಪಡಿತರ ಚೀಟಿಯಲ್ಲಿ ಬದಲಾವಣೆ, ಸೇವೆಯು ನನಗೆ ಕಾಲಮಿತಿಯಲ್ಲಿ ದೊರಕಿತು, ಸಕಾಲದ ಬಗ್ಗೆ ಗೊತ್ತಿಲ್ಲ, ಮಂಡಳಿಯ ತಂಡವು ಇದರ ಬಗ್ಗೆ ನನಗೆ ತಿಳಿಸಿತು, ನಾಗರಿಕರಿಗೆ ಇದು ಒಂದು ಉತ್ತಮ ಅಧಿನಿಮವಾಗಿದೆ/ಸಹಕಾರಿಯಾಗಿದೆ"ಎಂದು ತಿಳಿಸಿದರು. | **ಕೆ ರಮೇಶ್,**<br>**ತಂದೆ ಕೆ.ಬಿ ಶಿರೆಗರ್, ಕುಂದಾಪುರ,**<br>**SS**0990000435284<br>ಸರ್ವೆ ಇಲಾಖೆಯ ಸೇವೆಗಾಗಿ ಕೋರಿಕೆ,<br>“ಸಕಾಲದ ಬಗ್ಗೆ ಯಾವುದೆ ಪ್ರತಿಕ್ರಿಯೆ ನೀಡಲು ಇಚ್ಚಿಸುವುದಿಲ್ಲ, ಅಟ್ಲಾಸ್‌ಗಾಗಿ ನಿಗದಿತ ಸಮಯ 7 ದಿನ ಅತಿ ಹೆಚ್ಚು ಆಗಿದೆ, ಆದರೆ ಈಗ ಲಂಚ ಕೊಡದೆ ಕೆಲಸ ಮಾಡಿಕೊಡ್ಡುತ್ತಿದ್ದಾರೆ, ಕಾಲಮಿತಿಯನ್ನು ಕಡಮೆಗೊಳಿಸಿ” ಎಂದಷ್ಟೆ ಅರ್ಜಿದಾರರು ತಿಳಿಸಿದರು |
| **ಎಂ ಭುಜಂಗ ಶೆಟ್ಟಿ, ಹೆಂಗವಳ್ಳಿ,**<br>**ಕುಂದಾಪುರ, ಸರ್ವೆ ಇಲಾಖೆಗೆ ಸಂಬಂಧಿತ ಸೇವೆ,**<br>"ಸರಕಾರಿ ಕಛೇರಿಗಳಿಗೆ ಹೋಗಿ ಸೇವೆ ಪಡೆಯಬೇಕೆಂದರೆ ಬಹಳ ಇರುಸುಮುರುಸಾಗುತ್ತದೆ, ಅಲ್ಲಿನ ಅಧಿಕಾರಿಗಳ ವರ್ತನೆ ಸರಿಯಿರುವುದಿಲ್ಲ /ಅಧಿಕಾರ ದರ್ಪವು ಸಾರ್ವಜನಿಕರನ್ನು ಘಾಸಿಗೊಳಿಸುತ್ತಿದೆ”  ಸರ್ವೆ ಇಲಾಖೆಯಿಂದ ಅಟ್ಲಾಸ್ ಪಡೆಯಲು ಅರ್ಜಿದಾರರು ಅರ್ಜಿ ಹಾಕಿದ್ದಾರೆ. | **ತಿಮ್ಮವ್ವ ಪ್ರಭುಲಿಂಗ ಮಹಾರಾಜ,**<br>**ಬಾದಾಮಿ,**<br>**ಕಂದಾಯ ಇಲಾಖೆಯ ಸೇವೆಗಾಗಿ ಕೋರಿದ್ದರು,**<br>**RD**0038110008456<br><br>"ಆದಾಯ ಪ್ರಮಾಣ ಪತ್ರಕ್ಕಾಗಿ ಕೋರಿದೆ ಯಾವುದೆ ತ್ರಾಸಿಲ್ಲದೆ ನಿಗದಿತ ಕಾಲಮಿತಿಯಲ್ಲಿ ಸೇವೆ ದೊರಕಿತು "ಎಂದು ಸಂತಸದಿಂತ ತಿಳಿಸಿದ್ದಾರೆ. |

***ಫಕ್ರುದ್ದೀನ್ ಸಾಬ್ ತಂ  ಮಹೆಬೂಬ್,***
***FD*** *0014000600497*
***ಗಂಗಾವತಿ, ಕೊಪ್ಪಳ ಜಿಲ್ಲೆ.***
***ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ***

*ಸೇವೆಯೆನೋ ದೊರಕಿತು,  ಆದರೆ ಸರಕಾರಿ ಅಧಿಕಾರಿಗಳ ವರ್ತನೆಯು ಸರಿಯಾಗಿಲ್ಲಾ, ಇದರ ಬಗ್ಗೆ ಕ್ರಮ ವಹಿಸಬೇಕು, ಮೊದಲು ಎಲ್ಲಾರು ಸಾರ್ವಜನಿಕರು ನಂತರ  ಅಧಿಕಾರಿಗಳು ಎಂಬುದನ್ನು ಮನವರಿಕೆ ಮಾಡಿಸಿಕೊಡುವುದು ಅವಶ್ಯಕವಾಗಿದೆ"*

***ವಿಠ್ಠಲ,***
***PR*** *0011000876210*
***ಗುಲ್ಬರ್ಗ,***
***ಗ್ರಾಮೀಣಾಭಿವೃದ್ಧಿ ಸೇವೆಗಾಗಿ ಕೋರಿಕೆ ಸಲ್ಲಿಸಿದ್ದರು***

*"ಜಾಬ್ ಕಾರ್ಡ್‌ಗಾಗಿ ಅರ್ಜಿ ಹಾಕಿದ್ದೆ. ಗ್ರಾಮಾಂತರ ಪ್ರದೇಶದಲ್ಲಿ ಸಕಾಲದ ಬಗ್ಗೆ   ಜಾಗೃತಿ ಕಡಿಮೆಯಿದ್ದು ಜಾಗೃತಿಗಾಗಿ ಸೂಕ್ತ ಕ್ರಮ ಕೈಗೊಳ್ಳಬೇಕು" ಎಂದು ಅರ್ಜಿದಾರರು ತಿಳಿಸಿದ್ದಾರೆ.*

***ಧನ್ಯ ಮೆಡಿಕಲ್ಸ್,***
***DD*** *0194100000053*
***ಭದ್ರಾವತಿ,***

*ಇವರು ಔಷಧ ನಿಯಂತ್ರಣ ಇಲಾಖೆಗೆ ಪರವಾನಗಿ ನವೀಕರಣಕ್ಕೆ ಕೋರಿಕೆಯನ್ನು  ಸಲ್ಲಿಸಿದ್ದು, ಅದರ ಬಗ್ಗೆ ನಾಗರಿಕರು ತಮ್ಮ ಅಭಿಪ್ರಾಯವನ್ನು  ಈ ರೀತಿ ವ್ಯಕ್ತಪಡಿಸಿದ್ದಾರೆ,*

*"ಮೊದಲೆಲ್ಲ ಸರಕಾರಿ ಕೆಲಸಗಳು ನಿಧಾನವಾಗಿ ಆಗುತ್ತಿದ್ದವು, ಆದರೆ ಈ ಯೋಜನೆ ಬಂದಾಗಿನಿಂದ ತುಂಬಾ ಅನುಕೂಲವಾಗುತ್ತಿದೆ, ನಾನು ಕೋರಿದ ಸೇವೆ ಲೈಸೆನ್ಸ್ ನವೀಕರಣ 30 ದಿನದೊಳಗೆ ಪಡೆದಿದ್ದೇನೆ" ಎಂದು ಸಂತಸದಿಂದ ತಿಳಿಸಿದರು.*

***ಮೇಘ ನಿಲಯ, ಸಿದ್ದನಾಯಕ ರಸ್ತೆ,***
***ಕುಂದಾಪುರ,***
***ಸರ್ವೆ ಇಲಾಖೆಗೆ ಸಂಬಂಧಿತ ಸೇವೆ,***
*ಅರ್ಜಿದಾರರು ಹಿರಿಯ ನಾಗರಿಕರಾಗಿದ್ದು, ಜನರ ಬಗ್ಗೆ ಕಳಜಿ ಹೊಂದಿರುವ ಮನೋಭಾವದವರಾಗಿದ್ದಾರೆ, "ನನ್ನಲ್ಲಿ ಮೊಬೈಲ್ ಸಂಖ್ಯೆ ಇರಲಿಲ್ಲ ಸ್ಥಿರ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಲು ಕೊಟ್ಟೆ.  'ಸಕಾಲ'ಕ್ಕೆ ಭಷ್ಟಚಾರದ ವಿರುದ್ಧ ಹೋರಾಟ ಸ್ವತಂತ್ರವಾದ ಹಕ್ಕು ಇರಬೇಕು, ಯುವಜನರು ಸಕಾಲದ ಬಗ್ಗೆ ಹೆಚ್ಚಿನ ಗಮನವಿರಿಸಬೇಕು ಇದರಿಂದ ಸಕಾಲ ಯಶಸ್ವಿಯಾಗಿ ಸಾಗುತ್ತದೆ" ಎಂದು. ಅಭಿಪ್ರಾಯಪಟ್ಟಿದ್ದಾರೆ.*

***ಶ್ರೀ ವಿಘ್ನೇಶ್ವರ ಮೆಡಿಕಲ್ ಸ್ಟೋರ್ಸ್,***
***DD*** *0184100000050*
***ಶಿಕಾರಿಪುರ,***

*ಔಷಧ ನಿಯಂತ್ರಣ ವಿಭಾಗಕ್ಕೆ ನೊಂದಾಯಿತ ಔಷಧಿಕಾರರ ಸೇರ್ಪಡೆ/ಬದಲಾವಣೆಗೆ ಸಂಬಂಧಿತ  ಸೇವೆಯನ್ನು ನಾಗರಿಕರು ಕೋರಿದ್ದರು,  ಸೇವೆ ದೊರೆತ ನಂತರ ಅವರ ಮರುಸ್ಪಂದನೆ ಈ ಕೆಳಕಂಡಂತೆ ಇದೆ.*

*"ಇಂತಹ ಯೋಜನೆಗಳಿಂದ ಸಾರ್ವಜನಕರಿಗೆ ಖಂಡಿತವಾಗಿಯೂ ಉಪಯೋಗವಾಗುತ್ತಿದೆ" ಎಂದು ಉದ್ಗಾರಿಸಿದ್ದಾರೆ.*

***ತಿಮ್ಮವ್ವ***
***FD*** *0014000600339*
***ಕೊಪ್ಪಳ***
***ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಸೇವೆಗಾಗಿ ಕೋರಿದ್ದರು***

*"ಸಕಾಲದ ಬಗ್ಗೆ ನನಗೆ ಗೊತ್ತಿಲ್ಲಾ ಆದರೆ ಕೋರಿದ ಸೇವೆ ತ್ವರಿತವಾಗಿ ದೊರೆತಿದೆ, ಸರಕಾರಿ ಸೇವೆಗಳನ್ನು ನೀಡುವ ಬಗ್ಗೆಯಲ್ಲಿ ಇನ್ನೂ  ಹೆಚ್ಚಿನ ಪ್ರಗತಿಯನ್ನು ಸಾಧಿಸಬೇಕಿದೆ. ಸೇವೆಗಳನ್ನು ದೊರಕಿಸಿಕೊಳ್ಳುವ ಕ್ರಮವು ಸರಳವಾಗಬೇಕು."*

| | |
|---|---|
| ***ಹರಿ ಅಂಡ್ ಹರಿ ಮೆಡಿಕಲ್ಸ್***<br>***DD****0164100000054,*<br>***ಶಿವಮೊಗ್ಗ,***<br><br>*ಔಷಧ ನಿಯಂತ್ರಣ ಇಲಾಖೆಗೆ ಮಾರಾಟ ಮಳಿಗೆ ಸ್ಥಾಪನೆಗೆ ಪರವಾನಗಿಯನ್ನು ನೀಡಲು ಕೋರಿದ್ದು, ಸಕಾಲದ ಬಗ್ಗೆ ಅವರಿಗೆ ಬಹಳ ಅಭಿಮಾನ ಇದೆ, ಈ ಹಿಂದೆಯು ಸಹ ಸಕಾಲದ ಮೂಲಕ ಸೇವೆಯನ್ನು ಸಮಯಕ್ಕೆ ಪಡೆದಿದ್ದು ಮತ್ತೆ ಸಕಾಲದಿಂದ ನಿಗದಿತ ಕಾಲಮಿತಿಯಲ್ಲಿ ಸೇವೆಯನ್ನು ನೀಡಿದ್ದಕ್ಕೆ ಸಂತೋಷ ವ್ಯಕ್ತಪಡಿಸಿದ್ದಾರೆ.* | ***ತೌಸಿಫ್ ಅಹಮ್ಮದ್,***<br>***ಚಿತ್ರದುರ್ಗ,***<br>*ನಗರಸಭೆಯಲ್ಲಿ ಜನನ ಪತ್ರಕ್ಕಾಗಿ ಅರ್ಜಿ ಸಲ್ಲಿಸಿದ್ದರು, "ಸಕಾಲ ಮಿಷನ್ ಕಾರ್ಯ ವಿಧಾನ ಚನ್ನಾಗಿದೆ ಹಾಗೂ ನಾನು ಅರ್ಜಿ ಸಲ್ಲಿಸಿದ ಒಂದೆರೆಡೆ ದಿನದಲ್ಲಿ ಜನನ ಪ್ರಮಾಣ ಪತ್ರ ದೊರಕಿತು"* |

ರಿಗೆ

ಶ್ರೀಮತಿ ಡಾ .ಶಾಲಿನಿ ರಜನೀಶ್

ಮಾನ್ಯ ಸರಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಕಾರ್ಯದರ್ಶಿಗಳೂ

ಮತ್ತು ಸಕಾಲ ಯೋಜನೆ ನಿರ್ದೇಶಕಿ

ಬೆಂಗಳೂರು

ರಿಂದ

ವಿಜಯಕುಮಾರ್ ಶೆಟ್ಟಿ

ಹೆಜಮಾಡಿ ಗ್ರಾಮ . ಉಡುಪಿ ಜಿಲ್ಲೆ

ಫೋನ್ : 9483937777 ಮತ್ತು 8050298067

ಮಾನ್ಯರೆ ,

ವಿಷಯ :- ಪಂಚಾಯತ್ ಅಭಿವೃದ್ಧಿ ಅಧಿಕಾರಿ ಗೆ ಸಕಾಲ ಯೋಜನೆಯಲ್ಲಿ ಅರ್ಜಿ ಸಲ್ಲಿಸಿದರೂ ಲಂಚಕ್ಕಾಗಿ ತೊಂದರೆ ನೀಡುವ ಬಗ್ಗೆ ದೂರು ,ಹಾಗೂ ತನಿಖೆ ನಡೆಸಿ ಕರ್ತವ್ಯ ಲೋಪ ಎಸಗಿದ ಅಧಿಕಾರಿ ವಿರುದ್ಧ ಶೀಘ್ರದಲ್ಲೇ ಕ್ರಮ ಕೈಗೊಂಡು ನ್ಯಾಯ ದೊರಕಿಸ ಬೇಕಾಗಿ ವಿನಂತಿ

ಉಲ್ಲೇಖ :- ೧) ನನ್ನ ಸಕಾಲ ಅರ್ಜಿ ಸಂಖ್ಯೆ PR0011000660270 ( FORM 9 AND FORM NO 11)ಗೆ (ಕರ ನಿರ್ಧರಣ ಪಟ್ಟಿ ಬದಲಾವಣೆ )

೨) ನಗರ ಮತ್ತು ಗ್ರಾಮಾಂತರ ಇಲಾಖೆ ನಿರ್ದೇಶನ ಬಿಡುಗಡೆ ಆದೇಶ ಸಂಖ್ಯೆ 422/2013-14/1131 ದಿನಾಂಕ 28/08/2013

೩) ನನ್ನ ಪುನರ್ ಪರಿಶೀಲನೆ ಅರ್ಜಿ : 12/11/2013

ಉಡುಪಿ ಜಿಲ್ಲೆ ಹೆಜಮಾಡಿ ಸರ್ವೇ ನಂಬ್ರ 23/12 ಮತ್ತು 23/13 FORM 9 AND FORM NO 11 ಗೆ (ಕರ ನಿರ್ಧರಣ ಪಟ್ಟಿ ಬದಲಾವಣೆ ) ಗ್ರಾಮ ಪಂಚಾಯತ್ ಗೆ ನಾನು ಅರ್ಜಿ ಸಲ್ಲಿಸಿದ್ದೇನೆ . ನನ್ನ ಸಕಾಲ ಅರ್ಜಿ ಸಂಖ್ಯೆ PR0011000660270 ಆದರಂತೆ ಉಡುಪಿ ಜಿಲ್ಲೆಯ ನಗರ ಮತ್ತು ಗ್ರಾಮಾಂತರ ಇಲಾಖೆಯವರು ನಿರ್ದೇಶನ ಬಿಡುಗಡೆ ಆದೇಶ ಸಂಖ್ಯೆ 422/2013-14/1131 ದಿನಾಂಕ 28/08/2013 ರಂತೆ ಹೆಜಮಾಡಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗೆ ಗೆ FORM 9 AND FORM NO 11 (ಕರ ನಿರ್ಧರಣ ಪಟ್ಟಿ ಬದಲಾವಣೆ ) ಗೆ ನೀಡಲು ನಿರ್ದೇಶನ ನೀಡಿರುತ್ತಾರೆ . ಆದರೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪ್ರತಿಭಾ ಕುದ್ರನ್ನ ಅವರು 10,000 ರೂಪಾಯಿ ಲಂಚ ದ ಹಣ ಕೇಳಿದ್ದು . ನಾವುಗಳು ನೀಡದೆ ಇದ್ದುದರಿಂದ FORM 9 AND FORM NO 11 ಗೆ (ಕರ ನಿರ್ಧರಣ ಪಟ್ಟಿ ಬದಲಾವಣೆ ) ಪ್ರಮಾಣ ಪತ್ರ ಸಂಖ್ಯೆ 42708 ರಲ್ಲಿ ಸರ್ವೇ ನಂಬ್ರ ಕಾಲಂ ನಲ್ಲಿ ಲಂಚ ಕೊಡದೆ ಇದ್ದದಕ್ಕೆ ಕೋಪಗೊಂಡು ತಪ್ಪಾಗಿ 23/*12 ಹಾಗೂ 23/*12 ನಮೂದಿಸಿ ನೀಡಿರುತ್ತಾರೆ . ಇದರಿಂದ ನಮಗೆ ದಸ್ತಾವೇಜು ನೊಂದಾವಣೆ ಮಾಡಲು ಬರುದಿಲ್ಲ. ನನಗೆ ತುಂಬಾ ನಷ್ಟ ಉಂಟು ಆಗಿರುತ್ತದೆ. ಎಂತಹ ಪ್ರಕರಣ ಪಂಚಾಯತ್ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪ್ರತಿಭಾ ಕುದ್ರನ್ನ ಮಾಡುತ್ತಲೇ ಇರುತ್ತಾರೆ . ಕೈ ಕಾಲು ಹಿಡಿದರೂ ಕರುಣೆ ತೋರಿಸುದಿಲ್ಲ. ಹಿಟ್ಲರ್ ತರ ವರ್ತನೆ ಮಾಡುತ್ತಿದ್ದಾರೆ . ಅದ್ದರಿಂದ ಕರ್ತವ್ಯ ಲೋಪ ಎಸಗಿದ ಅಧಿಕಾರಿ ವಿರುದ್ಧ ಶೀಘ್ರದಲ್ಲೇ ಕ್ರಮ ಕೈಗೊಂಡು ನ್ಯಾಯ ದೊರಕಿಸ ಬೇಕಾಗಿ ವಿನಂತಿ ...

ದನ್ಯವಾದ ಗಳೊಂದಿಗೆ ,

ಇತಿ ತಮ್ಮ ವಿಶ್ವಾಸಿ

ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

# ಜಿಲ್ಲಾಧಿಕಾರಿಗಳ ಕಾರ್ಯಾಲಯ

ಚಾಮರಾಜನಗರ ಜಿಲ್ಲೆ, ಚಾಮರಾಜನಗರ

☎ 08226-223160
08226-223170
Fax: 08226-223180

ಸಂಖ್ಯೆ: [illegible]2013-14 ದಿನಾಂಕ: 11-11-2013

5270
22/11/13

ಇವರಿಗೆ,

1. ಪ್ರಾದೇಶಿಕ ಜಂಟಿ ನಿರ್ದೇಶಕರು,
   ಕಾಲೇಜು ಶಿಕ್ಷಣ ಇಲಾಖೆ,
   ವಿನೋಬ/ಮಾನಸೂರು ರಸ್ತೆ,
   ಮೈಸೂರು.
2. ಉಗ್ರಾಣ ವ್ಯವಸ್ಥಾಪಕರು,
   ಕರ್ನಾಟಕ ರಾಜ್ಯ ಉಗ್ರಾಣ ನಿಗಮ
   ಎ.ಪಿ.ಎಂ.ಸಿ ಯಾರ್ಡ್,
   ಕೊಳ್ಳೇಗಾಲ
3. ಉಗ್ರಾಣ ವ್ಯವಸ್ಥಾಪಕರು,
   ಕರ್ನಾಟಕ ರಾಜ್ಯ ಉಗ್ರಾಣ ನಿಗಮ
   ಎ.ಪಿ.ಎಂ.ಸಿ ಯಾರ್ಡ್,
   ಚಾಮರಾಜನಗರ.
4. ರೇಷ್ಮೆ ಉಪ ನಿರ್ದೇಶಕರು,
   ಜಿಲ್ಲಾ ಪಂಚಾಯತ್,
   ಚಾಮರಾಜನಗರ

ಮಾನ್ಯರೆ,

ವಿಷಯ: "ಕರ್ನಾಟಕ ಸಕಾಲ ಸೇವೆಗಳ ಕಾಯಿದೆ-2011" ರಡಿಯಲ್ಲಿ ಅರ್ಜಿಗಳನ್ನು ಆನ್‌ಲೈನ್ ಗೆ ನಮೂದಿಸದೆ "ಬೈಪಾಸ್" ಮಾಡುತ್ತಿರುವ ಬಗ್ಗೆ.

ಉಲ್ಲೇಖ: ಮಾನ್ಯ ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, (ಆ.ಸು.ತರಬೇತಿ ಮತ್ತು ಸಾ.ಪಿ.ವೆ) ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಅ.ಸ.ಪತ್ರ ಸಂ.ಸಿಆಸುಇ/197 ಸಾಸೇವಾ 2013 ದಿ:14-08-2013.

>>0<<

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಸೂಚಿಸಿರುವಂತೆ ಆಗಸ್ಟ್-2013ರಿಂದ ಹೊಸದಾಗಿ 110 ಸೇವೆಗಳು ಸಕಾಲಕ್ಕೆ ಸೇರ್ಪಡೆಯಾಗಿರುವುದು ಸರಿಯಷ್ಟೆ. ಆದರೆ ಆಗಸ್ಟ್-2013 ಮಾಹೆಯಿಂದ ಇಲ್ಲಿಯವರೆಗೆ(11-11-2013 ರವರೆಗೆ) ತಮ್ಮ ಇಲಾಖಾ ವ್ಯಾಪ್ತಿಯಲ್ಲಿ ಬರುವ ಕಛೇರಿಗಳಲ್ಲಿ ಅರ್ಜಿಗಳನ್ನು ಸಕಾಲದಡಿ ಆನ್‌ಲೈನ್‌ಗೆ ನಮೂದಿಸದೇ ಇರುವುದು ಕಂಡು ಬಂದಿರುತ್ತದೆ. ಇನ್ನು ಮುಂದೆ ಸಕಾಲ ಯೋಜನೆಯಡಿಯಲ್ಲಿಯೇ ಅರ್ಜಿಗಳನ್ನು ಸ್ವೀಕರಿಸಿ, ಆನ್‌ಲೈನ್ ನಲ್ಲಿ ನಮೂದಿಸಿ ಅರ್ಜಿದಾರರಿಗೆ ಸಕಾಲ ಸ್ವೀಕೃತಿ ಪತ್ರವನ್ನು ನೀಡುವುದು ಹಾಗೂ ಕಚೇರಿ ಮುಂಭಾಗದಲ್ಲಿ ಸಕಾಲ ಸೇವೆಗಳಿಗೆ ಸಂಬಂಧಿಸಿದಂತೆ ಸೂಚನಾ ಫಲಕವನ್ನು ಪ್ರದರ್ಶಿಸುವುದು ಕಡ್ಡಾಯವಾಗಿರುತ್ತದೆ. ತಮ್ಮ ಇಲಾಖಾ ವ್ಯಾಪ್ತಿಯಲ್ಲಿನ ಅರ್ಜಿ ಸ್ವೀಕೃತಿಗಳ ಅಂಕಿಅಂಶ ಈ ಕೆಳಕಂಡಂತಿದೆ.

| ಇಲಾಖೆ/ಕಛೇರಿಯ ಹೆಸರು | ಸ್ವೀಕೃತಿಗಳ ಸಂಖ್ಯೆ(ಆಗಸ್ಟ್-2013 ರಿಂದ 11-11-2013 ರ ವರೆಗೆ) |
|---|---|
| ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ವಿನೋಬ/ಮಾನಸೂರು ರಸ್ತೆ, ಮೈಸೂರು (ಚಾಮರಾಜನಗರ ಜಿಲ್ಲೆ ಸಂಬಂಧಿಸಿದಂತೆ) | 1 |
| ಉಗ್ರಾಣ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಉಗ್ರಾಣ ನಿಗಮ ಎ.ಪಿ.ಎಂ.ಸಿ ಯಾರ್ಡ್, ಕೊಳ್ಳೇಗಾಲ | 0 |
| ಉಗ್ರಾಣ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಉಗ್ರಾಣ ನಿಗಮ ಎ.ಪಿ.ಎಂ.ಸಿ ಯಾರ್ಡ್, ಚಾಮರಾಜನಗರ | 0 |
| ರೇಷ್ಮೆ ಉಪ ನಿರ್ದೇಶಕರು, ಜಿಲ್ಲಾ ಪಂಚಾಯತ್, ಚಾಮರಾಜನಗರ | 0 |

-2-

ಆದ್ದರಿಂದ ಇನ್ನು ಮುಂದೆ ಕಡ್ಡಾಯವಾಗಿ "ಸಕಾಲ" ದಡಿಯಲ್ಲಿಯೇ ಅರ್ಜಿಗಳನ್ನು ಸ್ವೀಕರಿಸಿ ಆನ್‌ಲೈನ್‌ಗೆ ನಮೂದಿಸಲು ಸೂಚಿಸಿದೆ.


ತಮ್ಮ ವಿಶ್ವಾಸಿ,
ಸಹಿ/-
ಅಪರ ಜಿಲ್ಲಾಧಿಕಾರಿ,
ಚಾಮರಾಜನಗರ ಜಿಲ್ಲೆ, ಚಾಮರಾಜನಗರ

ಪ್ರತಿಯನ್ನು:
ನಿರ್ದೇಶಕರು,ಸಕಾಲ ಮಿಷನ್,2ನೇ ಹಂತ,6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ,ಬೆಂಗಳೂರು-01 ರವರಿಗೆ ಮಾಹಿತಿಗಾಗಿ

ಅಪರ ಜಿಲ್ಲಾಧಿಕಾರಿ,
ಚಾಮರಾಜನಗರ ಜಿಲ್ಲೆ ಚಾಮರಾಜನಗರ

## ಸಿ. ಕಛೇರಿಗಳ ಮರುಸ್ಪಂದನೆ

*ನಾಗರಿಕರು ಸಕಾಲದಡಿ ದೂರು ನೀಡಿದ ತದ ನಂತರ ದೂರುಗಳನ್ನು ನಿರ್ವಹಿಸಲಾಗಿದೆ*


ಕಸಘಟ್ಟಪುರ ಗ್ರಾಮ ಪಂಚಾಯ್ತಿ ಕಾರ್ಯಾಲಯ

ಹೆಸರಘಟ್ಟ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.

ದಿನಾಂಕ : 22-11-2013



ಚರಂಡಿ ಸ್ವಚ್ಛಗೊಳಿಸುತ್ತಿರುವ-ದೂರು ಕೊಡುವ ಮೊದಲು ಹಾಗೂ ನಂತರದ ದೃಶ್ಯ







## ಸೊಲದೇವನಹಳ್ಳಿ ಗ್ರಾಮದ ಕಾಲೋನಿಯಲ್ಲಿ ಸಮರ್ಪಕವಾಗಿ ಚರಂಡಿ ನಿರ್ಮಾಣ ಕಾಮಗಾರಿ– ದೂರು ಕೊಟ್ಟ ಮೊದಲು ಹಾಗೂ ತದ ನಂತರದ ದೃಶ್ಯಗಳು









# ಅಧ್ಯಾಯ –5

# ಘಟನಾವಳಿಗಳು ಹಾಗೂ ಪತ್ರಿಕ ವರದಿಗಳು

**ದಿನಾಂಕ 7.11.2013, ವಿಧಾನ ಸೌಧ, ಕಮಿಟಿ ಹಾಲ್, ಪ್ರಧಾನ ಮಂತ್ರಿಗಳ ಪ್ರಶಸ್ತಿ – ಕಮಿಟಿ ಮೀಟಿಂಗ್ – ಪರಿಶೀಲನಾ ಸಭೆ :**

ಕಮಿಟಿ ಸಭೆಯಲ್ಲಿ ಭಾರತ ಸರಕಾರ ಪ್ರಧಾನ ಮಂತ್ರಿಗಳ ಪುರಸ್ಕರ ತಂಡದಿಂದ ಶ್ರೀ ಸಿನ್ಹ, ಹಾಗೂ ಶ್ರೀ ಶರ್ಮಾ, ಶ್ರೀ ಟಿ.ಬಿ ಜಯಚಂದ್ರ ಮಾನ್ಯ ಕಾನೂನು ಮಂತ್ರಿಗಳು, ಡಾ। ಶಾಲಿನಿ ರಜನೀಶ್, ಶ್ರೀ ಮಿರ್ಜಿ ಹಾಗೂ ಶ್ರೀ ಲತಾ ಕೃಷ್ಣ ರಾವ್, ಗೃಹ ಹಾಗೂ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಜಂಟಿ ನಿರ್ದೇಶಕರು, ಡಾ॥ ವಾರ್ತಾ ಇಲಾಖೆ, ಡಾ: ಅಮಿತಾ ಪ್ರಸಾದ್, ಕಾರ್ಯದರ್ಶಿಗಳು, ಇ–ಆಡಳಿತ ಇಲಾಖೆ ಪ್ರಧಾನ ಕಾರ್ಯದರ್ಶಿ ಶ್ರೀ ದಾತ್ವಾಳ್, ಪಿಂಚಣಿ ಇಲಾಖೆ ನಿರ್ದೇಶಕರು ಸಭೆಯಲ್ಲಿ ಮಾತನಾಡಿದರು. ವಾರ್ತಾ ಇಲಾಖೆ ಜಂಟಿ ನಿರ್ದೇಶಕರು ಹಾಗೂ ಸಕಾಲ(ಪ್ರಚಾರ) ನೋಡಲ್ ಅಧಿಕಾರಿ ಡಾ: ಬಿ.ಆರ್.ಮಮತಾ, ಐ.ಐ.ಎಂ ಸಂಸ್ಥೆಯ ಪ್ರೊ. ರಮೇಶ್, ನ್ಯಾಷನಲ್ ಇನ್‌ಫಾರಮ್ಯಾಟಿಕ್ಸ್ ಸಂಸ್ಥೆಯ ಶ್ರೀ ಶ್ರೀನಿವಾಸನ್ ಹಾಗೂ ತಂಗವೇಲು, ತಜ್ಞ ಪ್ರೊ.ಎಸ್.ಹೆಚ್. ಮಿಶ್ರಾ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಶ್ರೀ ಭೈರಪ್ಪ, ಕ್ರಿಯೇಟ್ ಸಂಸ್ಥೆಯ ಶ್ರೀ ವೈ.ಜಿ.ಮುರಳೀಧರನ್ ಹಾಗೂ ಸಕಾಲ ಯೋಜನೆಯ ಫಲಾನುಭವಿ ಶ್ರೀಮತಿ ಸಂಗೀತಾ ಗುಪ್ತಾ, ಆಡಳಿತ ತರಬೇತಿ ಕೇಂದ್ರ, ಐ.ಐ.ಎಂ'ನ ಶ್ರೀ ಪಬ್ಬಿ ಶೆಟ್ಟಿ ಹಾಗೂ ಪ್ರೋಫೆಸರ್ ರಂಜನಿ ಹಾಗೂ ಇತರೆ ಇಲಾಖೆಯ ಕಾರ್ಯದರ್ಶಿಗಳು, ಶ್ರೀ ವರಪ್ರಸಾದ್ ರೆಡ್ಡಿ, ಸಕಾಲ ಆಡಳಿತಾಧಿಗಳು, ಶ್ರೀ ಸುಬ್ರಮಣ್ಯ ಶ್ರೀಲಾಲ್, ನಿರ್ವಹಾಣ ಸಮಾಲೋಚಕರು, ಶ್ರೀ ಭರತ್ ರಾಮ್ ಶಂಕರ್, ಮಾಹಿತಿ ತಂತ್ರಜ್ಞಾನ ಸಮಾಲೋಚಕರು ಹಾಗೂ ಸಕಾಲದ ಇತರೆ ಸಿಬ್ಬಂದಿಗಳು, ಶ್ರೀಮತಿ ಜಯಲಕ್ಷ್ಮೆ, ಜಂಟಿ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ,ಅವರು ಉಪಸ್ಥಿತರಿದ್ದರು.

ಪ್ರತ್ಯಾಕ್ಷಿಕೆ ಮೂಲಕ ಸಕಾಲ ಮಂಡಳಿಯ ನಿರ್ದೇಶಕರು ಸಭೆಗೆ ಸಕಾಲ ಕಾರ್ಯ ವೈಖರಿಯನ್ನು ವಿವರಿಸಿದರು. ಇತರೆ ಇಲಾಖೆಯ ಕಾರ್ಯದರ್ಶಿಗಳು ಕೂಡ ಸಕಾಲ ಅಳವಡಿಕೆಯಿಂದಾಗಿ ತಮ್ಮ ಇಲಾಖೆಗೆ ಕಾರ್ಯ ವೈಖರಿಗಳು ಶಿಸ್ತಾಗಿ ಚುರುಕಾಗಿ ಕಾರ್ಯ ನಿರ್ವಹಿಸುತ್ತಿವೆ ಎಂದು ತಿಳಿಸಿದರು. ಉದಾಹರಣೆಗೆ ಶಸ್ತ್ರಸ್ತ್ರ ಪರವಾನಿ ಅರ್ಜಿ ಸಕಾಲ ಮೊದಲಿಗೆ 500 ವಿಲೇವಾರಿಯಾಗಿದ್ದು ಸಕಾಲ ಬಂದ ನಂತರ ಇದರ ಸಂಖ್ಯೆ ತೀವ್ರವಾಗಿ ಹೆಚ್ಚಾಗಿದೆ.

ಕೇಂದ್ರದ ತಂಡವು ಕೆಲವೊಂದು ವಿಚಾರಗಳನನ್ನು ಪುನರ್‌ಪರಿಶೀಲಿಸಲು ತಿಳಿಸಿತು, ಇದರ ಬಗ್ಗೆ ಮಂಡಳಿಯ ನಿರ್ದೇಶಕರು ಹಾಗೂ ಇತರೆ ಇಲಾಖೆಯ ಕಾರ್ಯದರ್ಶಿಗಳು, ಎನ್ ಐ ಸಿ, ಐ ಐ ಎಂ ಅವರು ಕೇಂದ್ರ ತಂಡಕ್ಕೆ ಸೂಕ್ತ ಉತ್ತರ ನೀಡಿದರು.



**ಕೇಂದ್ರ ತಂಡದ ಜೊತೆ ಮಾನ್ಯ ಕಾನೂನು ಸಚಿವರು**

*ಕೇಂದ್ರ ಸರ್ಕಾರವು ಪ್ರತಿ ವರ್ಷ ಅತ್ಯುನ್ನತ ಸಾಧನೆಗೈದ ಅಧಿಕಾರಿಗಳಿಗೆ/ಸಂಸ್ಥೆಗೆ ನೀಡುವ ಪ್ರಧಾನ ಮಂತ್ರಿಗಳ ಪ್ರಶಸ್ತಿಗೆ ರಾಜ್ಯದಿಂದ ಮೊದಲ ಹಂತದಲ್ಲಿ 'ಸಕಾಲ ಯೋಜನೆ' ಆಯ್ಕೆಯಾಗಿದೆ. ಈ ಹಿನ್ನೆಲೆಯಲ್ಲಿ ಯೋಜನೆಯ ಪರಾಮರ್ಶೆಗಾಗಿ ರಾಜ್ಯಕ್ಕೆ ಇಂದು ಭೇಟಿ ನೀಡಿದ್ದ ಕೇಂದ್ರ ಸರ್ಕಾರದ ತಜ್ಞರ ಸಮಿತಿಗೆ ಸಕಾಲ ಯೋಜನೆಯ ಕುರಿತು ಮಾನ್ಯ ಕಾನೂನು ಸಚಿವರು ವಿವರಿಸಿದರು.*

*ಮಾನ್ಯ ಕಾನೂನು ಮಂತ್ರಿಗಳು ಮಾತನಾಡುತ್ತ ಸಕಾಲ ಅಳವಡಿಕೆ ಸರಕಾರಿ ಸೇವೆಗಳ ಶಿಸ್ತಿನ ನಿರ್ವಹಣೆಗಾಗಿ ಹಾಗೂ ನಾಗರಿಕರಿಗೆ ಸುಲಭವಾಗಿ ಸೇವೆಗಳು ದೊರಕುವ ನಿಟ್ಟಿನಲ್ಲಿ ಅಳವಡಿಸಲಾಗಿದೆ, ಅತೀ ಹೆಚ್ಚು ಸರಕಾರಿ ಸೇವೆಗಳನ್ನು  ನೀಡುವಲ್ಲಿ ನಮ್ಮ ರಾಜ್ಯವು ಅಗ್ರಗಣ್ಯವಾಗಿದ್ದು ಹೆಮ್ಮೆಯ ವಿಚಾರವಾಗಿದೆ ಎಂದು ಸಭೆಗೆ ತಿಳಿಸಿದರು, ಇದಲ್ಲದೆ ಕುಂದುಕೊರತೆ ನಿವಾರಣೆಯಲ್ಲಿ ಪ್ರತಿಶತ 98% ಸಾಧನೆ ಸಾಧಿಸಿರುವುದು ಹಾಗೂ ಗರಿಷ್ಟ ಪ್ರಮಾಣದ ಭ್ರಷ್ಟಚಾರ ನಿಯಂತ್ರಣವಾಗುತ್ತಿರುವುದು  ಮಹತ್ತರ ಸಂಗತಿ ಆಗಿದೆ, ಇದಲ್ಲದೆ ಮಧ್ಯವರ್ತಿಗಳ ಹಾವಳಿಯು ಕಡಿಮೆಯಾಗಿದೆ, ಸಕಾಲ ದೂರುಗಳಲ್ಲದೆ ಸಕಾಲೇತರ ದೂರುಗಳ ನಿರ್ವಹಣೆಯು ಸಕಾಲ ಅಧಿನಿಯಮದಡಿ  ನಿರ್ವಹಿಸಲಾಗುತ್ತಿದೆ, ಇದರಿಂದ ನಾಗರಿಕರ ಮನದ ತುಡಿತ ಬಯಲಾಗಿದೆ, ಎಲ್ಲಾ ಸೇವೆಗಳು ಸಮಯಬದ್ಧವಾಗಿ ದೊರಕಬೇಕು ಎಂಬ ಬೇಡಿಕೆ ನಿಚ್ಚಳವಾಗಿದೆ ಹಾಗೂ ತ್ವರಿತಗತಿಯಲ್ಲಿ ಕುಂದುಕೊರತೆ ನಿವಾರಣೆ ನಾಗರಿಕರ ಅತ್ಯವಶ್ಯಕ ಬೇಡಿಕೆಯಾಗಿದೆ.*

*ಸಕಾಲ ಯೋಜನೆಯನ್ನು ಜಾರಿಗೆ ತರುವಲ್ಲಿ ರಾಜಕೀಯ ಇಚ್ಛಾಶಕ್ತಿ ಕಾರಣ ಭ್ರಷ್ಠಾಚಾರ ನಿರ್ಮೂಲನೆಯಲ್ಲಿ ಸಕಾಲ ಮಹತ್ವದ ಪಾತ್ರ ನಿರ್ವಹಿಸಿದೆ ಎಂದರು.  ಇದಲ್ಲದೆ ಯೋಜನೆ ಸಂಪೂರ್ಣವಾಗಿ ಪಾರದರ್ಶಕವಾಗಿದೆ ಎಂದರು.  ಕೆಳ ಹಂತದ ನೌಕರರಿಗೆ ಹೆಚ್ಚಿನ ಅಧಿಕಾರವನ್ನು ನೀಡಿ ತಾಂತ್ರಿಕವಾಗಿ ಅವರನ್ನು ಬಲಪಡಿಸಲು ಸರ್ಕಾರ ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತಿದೆ, ಕೆಲಸದ ಒತ್ತಡ ಹೆಚ್ಚಿರುವಲ್ಲಿ ಖಾಲಿ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಂಡಿದೆ ಎಂದು ಸಚಿವರು ವಿವರಿಸಿದರು.*

*ಸಕಾಲದ ವ್ಯಾಪ್ತಿಗೆ ಇನ್ನಷ್ಟು ಸೇವೆಗಳನ್ನು ಮುಂದಿನ ದಿನಗಳಲ್ಲಿ ತರಲಾಗುವುದು, ಸರ್ಕಾರದ ವತಿಯಿಂದ ಯೋಜನೆಯ ಸುಧಾರಣೆಗೆ ಎಲ್ಲ ರೀತಿಯ ಸಹಕಾರವನ್ನು ನೀಡಲಾಗುತ್ತಿದೆ ಎಂದು ಸಚಿವರು ತಿಳಿಸಿದರು.*

*ಸರ್ಕಾರದ ಎಲ್ಲ ಇಲಾಖೆಗಳ ವಿವಿಧ ಸೇವೆಗಳನ್ನು ಒಂದೇ ಸೂರಿನಡಿ ನೀಡುವ ವ್ಯವಸ್ಥೆ ಕಲ್ಪಿಸಲಾಗಿದೆಯೇ?  ಎಂದು ಕೇಂದ್ರ ಸರ್ಕಾರದ ಸಿಬ್ಬಂದಿ ಮತ್ತ ತರಬೇತಿ ಸಚಿವಾಲಯದ ಉಪಕಾರ್ಯದರ್ಶಿ  ಶ್ರೀ ವಿ.ಕೆ.ಸಿಹ್ನಾ  ರವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯ ಮಹಾನಿರ್ದೇಶಕರಾದ ಶ್ರೀಮತಿ ಅಮಿತಾ ಪ್ರಸಾದ್, ಈ ಬಗ್ಗೆ ಸರ್ಕಾರ ಚಿಂತನೆ ನಡೆಸಿದ್ದು, ಅತಿ ಶೀಘ್ರದಲ್ಲಿಯೇ ಇಂತಹ ಒಂದು ವ್ಯವಸ್ಥೆಯನ್ನು ಕಲ್ಪಿಸಲಿದೆ ಎಂದರು.   ಈ ನಿಟ್ಟಿನಲ್ಲಿ ಸಿಬ್ಬಂದಿ ಕೊರತೆ, ಅಗತ್ಯ ಉಪಕರಣಗಳ ಕೊರತೆ ನೀಗಿಸಲು ಮತ್ತು ಸರ್ಕಾರಿ ನೌಕರರ ಮನೋಭಾವದಲ್ಲಿ ಬದಲಾವಣೆ ತರುವ ನಿಟ್ಟಿನಲ್ಲಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.  ಇದಲ್ಲದೆ ಅಧಿಕಾರಿ/ನೌಕರರಿಗೆ ತರಬೇತಿಯನ್ನು ಕಡ್ಡಾಯ ಮಾಡಬೇಕೆಂದು ಅವರು ಮನವಿ ಮಾಡಿದರು.*

*ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಪ್ರಧಾನ ಕಾರ್ಯದರ್ಶಿ ಶ್ರೀಮತಿ  ಲತಾ ಕೃಷ್ಣರಾವ್ ಅವರು ಮಾತನಾಡಿ ಉತ್ತಮ ಆಡಳಿತಕ್ಕೆ ಸಕಾಲ ಒಂದು ಅತ್ಯುತ್ತಮ ಸಾಧನವಾಗಿದೆ ಎಂದರು.  ಯೋಜನೆ ಪ್ರಾರಂಭವಾದಾಗಿನಿಂದ ಈವರೆಗೆ ಅಗತ್ಯಕ್ಕೆ ತಕ್ಕಂತೆ ಬದಲಾವಣೆಗಳನ್ನು ಮಾಡಿಕೊಳ್ಳುತ್ತಾ ಬಂದಿದ್ದು, ಅರ್ಜಿಗಳ ಭೌತಿಕ ಚಲನೆಯನ್ನು ತಡೆಗಟ್ಟಿ, ಎಲ್ಲವನ್ನು ಆನ್‌ಲೈನ್ ಮುಖಾಂತರವೇ ಮಾಡಲಾಗುತ್ತಿದೆ ಎಂದರು.*

*ವಾಣಿಜ್ಯ ತೆರಿಗೆ ಇಲಾಖೆ ಕಾರ್ಯದರ್ಶಿ ಶ್ರೀ ಅಜಯ್ ಕುಮಾರ್ ಸೇಠ್ ಮಾತನಾಡಿ ನಿರ್ದಿಷ್ಟ ಸಮಯದೊಳಗೆ ಗುಣಮಟ್ಟದ ಸೇವೆಯನ್ನು ಸಾರ್ವಜನಿಕರಿಗೆ ಒದಗಿಸುವಲ್ಲಿ ಸಕಾಲ ಮಹತ್ವದ ಪಾತ್ರ ನಿರ್ವಹಿಸುತ್ತಿದೆ ಉನ್ನತ ಮಟ್ಟಕ್ಕೆ ಏರುವಲ್ಲಿ ಎಲ್ಲ ಇಲಾಖೆಗಳಿಗೆ ಸಹಕಾರ ನೀಡುತ್ತಿದೆ ಎಂದರು.  ಇದಲ್ಲದೆ ಸಂಪೂರ್ಣ ವ್ಯವಸ್ಥೆಯ ಮೇಲ್ವಿಚಾರಣೆಯನ್ನು ಬಾಹ್ಯ ಮೂಲದಿಂದ ಮಾಡುತ್ತಿರುವುದರಿಂದ ಯೋಜನೆ ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ಸಾದ್ಯವಾಗಿದೆ ಎಂದರು.*

*ಗೃಹ ಇಲಾಖೆಯ ಪ್ರಧಾನ ಕಾರ್ಯದರ್ಶಿ ಜ್ಯೋತಿಪ್ರಕಾಶ್ ಮಿರ್ಜಿ ಮಾತನಾಡಿ, ಸಕಾಲ ಅನುಷ್ಠಾನಕ್ಕೆ ಮುನ್ನ ಪೊಲೀಸ್ ಇಲಾಖೆಯಲ್ಲಿ ಯೋಜನೆಯನ್ನು ಸ್ವೀಕರಿಸಲು ಹಿಂಜರಿಕೆ ಇತ್ತು, ಆದರೆ ಈಗ ಸೇವೆಗಳನ್ನು ಸಮಯಬದ್ದವಾಗಿ ನೀಡಲಾಗುತ್ತಿದೆ ಎಂದರು.*

*ಸಕಾಲ ಮಿಷನ್ ನಿರ್ದೇಶಕರಾದ ಡಾ: ಶಾಲಿನಿ ರಜನೀಶ್ ಮಾತನಾಡಿ, ಕಂದಾಯ ಇಲಾಖೆಯಲ್ಲಿ ಖಾತೆ ಬದಲಾವಣೆ, ಜಾತಿ/ಆದಾಯ ಪ್ರಮಾಣ ಪತ್ರ, ವಾಸಸ್ಥಳ ದೃಢೀಕರಣ ಪತ್ರಕ್ಕೆ ಹೆಚ್ಚಿನ ಬೇಡಿಕೆ ಇದ್ದು, ಶೇಕಡ 96 ರಷ್ಟು ಬಾಕಿ ಇರುವ ಪ್ರಕರಣಗಳು ಕಂದಾಯ ಇಲಾಖೆಯದ್ದೇ ಆಗಿದೆ ಎಂದರು.  ಈ ಬಗ್ಗೆ ಹೆಚ್ಚಿನ ನಿಗಾ ವಹಿಸಲಾಗುತ್ತಿದ್ದು, ಬಾಕಿ ಪ್ರಕರಣಗಳನ್ನು ಕಡಿತಗೊಳಿಸುವ ನಿಟ್ಟಿನಲ್ಲಿ ಕಾರಣಗಳನ್ನು ಪಟ್ಟಿ ಮಾಡಲಾಗಿದ್ದು, ಅದರಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದರು.*

***ಹೆಚ್ಚು ವಿಳಂಬ ಮಾಡುತ್ತಿರುವ ಕಛೇರಿಗಳ ಜೊತೆ ಸಭೆ:*** *ವಿಳಂಬವಾಗಿ ಕಾರ್ಯ ನಿರ್ವಹಣೆಯಾಗುತ್ತಿರುವ  ತಾಲ್ಲೂಕುಗಳ ತಹಸಿಲ್ದಾರ್ /ಉಪತಹಸಿಲ್ದಾರ್ ಅವರನ್ನು ಸಭೆಗೆ ಕರೆಯಲಾಗಿತ್ತು, –ಸೆಪ್ಟಂಬರ್ ಮಾಹೆಯಲ್ಲಿ ಕಡೆಯ ಹತ್ತು ಶ್ರೇಯಾಂಕ ಗಳಿಸಿದ ತಾಲ್ಲೂಕುಗಳ ತಹಸಿಲ್ದಾರ್*

ರವರನ್ನು, ಯಾವ ಕಾರಣಗಳಿಂದ ಉತ್ತಮ ಕಾರ್ಯ ಸಾಧ್ಯವಾಗುತ್ತಿಲ್ಲ ಎಂಬುದರ ಬಗ್ಗೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಸಾನಿಧ್ಯದಲ್ಲಿ ಹಾಗೂ ಕೇಂದ್ರ ಸರಕಾರದ ಉಪಸ್ಥಿತಿಯಲ್ಲಿ ಸಭೆಯನ್ನು ನಡೆಸಲಾಯಿತು. ಸಭೆಯ ಚಿತ್ರವನ್ನು ಇಲ್ಲಿ ಲಗತ್ತಿಸಲಾಗಿದೆ.



ಕಂದಾಯ ಇಲಾಖೆಯ ಶ್ರೀ ಬಸವರಾಜು, ಪ್ರಧಾನ ಕಾರ್ಯರ್ಶಿಗಳು ಹಾಗೂ ಐ ಐ ಎಂ ಅಧ್ಯಾಯನ ತಂಡ ವಿಳಂಬವಾಗಿ ಕಾರ್ಯ ನಿರ್ವಹಿಸುತ್ತಿರುವ ತಾಲ್ಲೂಕುಗಳ ತಹಸಿಲ್ದಾರ್/ ಉಪತಹಸಿಲ್ದಾರ್‌ರೊಂದಿಗೆ ಮಿಷನ್ ನಿರ್ದೇಶಕರು ಚರ್ಚಿಸುತ್ತಿರವ ದೃಶ್ಯ

**ಪ್ರಕರಣಗಳನ್ನು ವೇಗವಾಗಿ ವಿಲೇವಾರಿ ಮಾಡಲು ಸಲಹೆ ಸೂಚನೆಗಳು:**

1) ಡಿಜಿಟಲ್ ಸಹಿ ಯನ್ನು ಆದಷ್ಟು ಬೇಗ ಒದಗಿಸುವುದು ಇದರಿಂದ ವಿಳಂಬಿತ ಸೇವಾ ವಿಲೇವಾರಿಗೆ ಯಾವುದೇ ರೀತಿಯ ಅವಕಾಶವಿರುವುದಿಲ್ಲ.

2) ನೆಟ್ ವರ್ಕ್ ಸಮಸ್ಯೆ ಪರಿಹರಿಸುವುದು, ಬೇರೆ ಯಾವುದೆ ಉತ್ತಮ ನೆಟ್ ವರ್ಕ್ ಬಳಸುವುದು..

3) ಕಸಬಾ ನಾಡ ಕಛೇರಿಗೂ ಸಹ ಸೌರಶಕ್ತಿ ಸೌಲಭ್ಯವನ್ನು ವಿಸ್ತರಿಸುವುದು.

4) ಪ್ರಕ್ರಿಯೆ ಸರಳೀಕರಣ ಉದಾ: ಖಾತಾ ಬದಲಾವಣೆ ಪ್ರಕ್ರಿಯೆನ್ನು ಶಾಸನಬದ್ಧವಾದ 30 ದಿನಗಳನ್ನು ಕಡಿಮೆ ಮಾಡಲು ಪರಾಮರ್ಶಿಸುವುದು ಹಾಗೂ ಪಹಣಿಯಲ್ಲಿ ಲೋಪಗಳನ್ನು ತಿದ್ದುಪಡಿ ಮಾಡುವ ಅಧಿಕಾರವನ್ನು ಉಪ ವಿಭಾಗಾಧಿಕಾರಿಗಳಿಂದ ತಹಶೀಲ್ದಾರರಿಗೆ ಪ್ರತ್ಯಾಯೋಜನೆ ಮಾಡಿದಲ್ಲಿ ನಾಗರೀಕರಿಗೆ ಉಪಯುಕ್ತವಾಗುತ್ತದೆ.

5) ಓವರ್ ದಿ ಕೌಂಟರ್ ಯೋಜನೆ: ವಿವಿಧ ಇಲಾಖೆಗಳ ದತ್ತಾಂಶಗಳ ಕ್ರೂಢಿಕರಣದಿಂದ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಭೂಮಿ, ಆಹಾರ ಮತ್ತು ನಾಗರೀಕರ ಸರಬರಾಜು, ಸಾರಿಗೆ ಇಲಾಖೆ, ಹೆಚ್ ಆರ್ ಎಂ ಎಸ್ ಇತ್ಯಾದಿ) ವಸ್ತು ನಿಷ್ಠ ಹಾಗೂ ವೇಗದ ವಿಲೇವಾರಿ ಅರ್ಜಿಗಳನ್ನು ಖಚಿತಪಡಿಸಿಕೊಳ್ಳುವುದು.

6) ಕಂದಾಯ ಇಲಾಖೆಯ ಸೇವೆಗಳನ್ನು ಆನ್ ಲೈನ್ ಮುಖಾಂತರ ಒದಗಿಸುವುದು.

7) ಸ್ವೀಕೃತವಾಗುವ ಅರ್ಜಿಗಳಿಗೆ ಕಡ್ಡಾಯ ಸ್ವೀಕೃತಿ (ಸಕಾಲ) ಪತ್ರ ನೀಡುವುದು ಹಾಗೂ ಕರೆ ಕೇಂದ್ರದ ದೂರವಾಣಿ ಸಂಖ್ಯೆಯನ್ನು ಮುದ್ರಿಸುವುದು.

8) ಕಂದಾಯ ಇಲಾಖೆಯ ಮುಜರಾಯಿ ಶಾಖೆಯ ಸೇವೆಗಳನ್ನು ಮತ್ತು ನೋಂದಣಿ ಮತ್ತು ಮುದ್ರಾಂಕಗಳ ಇಲಾಖೆಯ ಹೆಚ್ಚುವರಿ ಸೇವೆಗಳನ್ನು ಸಕಾಲದಡಿ ಸೇರಿಸಬಹುದಾಗಿರುತ್ತದೆ.

9) 7 ಬಾರಿಗಿಂತ ಹೆಚ್ಚು ವಿಳಂಬ ಮಾಡಿದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

10) ಸಕಾಲ ಸೇವೆಗಳನ್ನು ಕೋರಿ ಬರುವ ಅರ್ಜಿಗಳಿಗೆ ಕಡ್ಡಾಯವಾಗಿ ಜಿ ಎಸ್ ಸಿ ಸ್ವೀಕೃತಿ ನೀಡುವ ಬಗ್ಗೆ ವಿಶೇಷ ಕಾಳಜಿ ವಹಿಸುವುದು.

11) ತಾಲ್ಲೂಕು ಕಛೇರಿಯ ಅಭಿಲೇಖಾಲಯದಲ್ಲಿ/ ಸರ್ವೇ ವಿಭಾಗಕ್ಕೆ ಸಂಬಂಧಿಸಿದಂತೆ ನಕಲು ಪ್ರತಿಗಳನ್ನು ನೀಡುವ ಸೇವೆ, ಜನನ ಮತ್ತು ಮರಣ ದೃಢೀಕರಣ ಪತ್ರ ನೀಡುವ ಸೇವೆ, ಪಹಣಿ ತಿದ್ದುಪಡಿ, ಜಮೀನು ಅನ್ಯ ಸಂಕ್ರಮಣ ಸೇವೆಗಳು ಬೈಪಾಸ್ ಆಗುತ್ತಿರುವ ಬಗ್ಗೆ.

12) ಬಡ್ತಿ ಪಡೆದ ಗ್ರೇಡ್ –1 ಹಾಗೂ ಗ್ರೇಡ್ –2 ತಹಶಿಲ್ದಾರರಿಗೆ ಸಂವೇದನಾಶೀಲ ತರಬೇತಿ ನೀಡುವುದು.

13) ಅರ್ಜಿದಾರರ ಅಥವಾ ಅವರ ಹತ್ತಿರದ ಸಂಬಂಧಿಯ ಮೊಬೈಲ್ ನಂಬರ್‌ಗಳನ್ನು ಕಡ್ಡಾಯವಾಗಿ ಪಡೆದುಕೊಳ್ಳುವಂತೆ ಡಾಟಾ ಎಂಟ್ರಿ ಆಪರೇಟರ್ ಗಳಿಗೆ ಸೂಚನೆ ನೀಡುವುದು. ಇದುವರೆಗೂ ಮೊಬೈಲ್ ಸಂಖ್ಯೆಗಳನ್ನು ಪಡೆದಿರುವ ಸಂಖ್ಯೆಗಳು ಅತೀ ಕಡಿಮೆ ಎಂದು ದತ್ತಾಂಶದಿಂದ ತಿಳಿದು ಬರುತ್ತದೆ ಹಾಗೂ ಇದನ್ನು ಕೆಲವೊಮ್ಮೆ ತಪ್ಪಾಗಿ ದಾಖಲಿಸಲಾಗಿರುತ್ತದೆ. ನಾಡ ಕಛೇರಿಯಲ್ಲಿ ಡಾಟ ಎಂಟ್ರಿ ಆಪರೇಟರ್ ಗಳ ಕೆಲಸವನ್ನು ಸ್ವತ: ಗ್ರಾಮ ಲೆಕ್ಕಿಗರು ನಿರ್ವಹಿಸಿದರೆ ಉತ್ತಮ.

14) ಆದ್ಯತೆಯ ಮೇರೆಗೆ ಮೇಲ್ಮನವಿಗಳ ಬಾಕಿಯನ್ನು ಮುಕ್ತಾಯಗೊಳಿಸುವುದು.

15) ಉಪ ವಿಭಾಗಾಧಿಕಾರಿಗಳು ತಮ್ಮ ಕಾರ್ಯಕ್ಷೇತ್ರದಲ್ಲಿ ಸಕಾಲ ಯೋಜನೆಯಡಿ ಸಾಧಿಸಿದ ಪ್ರಗತಿ ವರದಿಯನ್ನು ಪ್ರತಿ ವಾರವು ಸಕಾಲ ಮಂಡಳಿಗೆ ಕಳುಹಿಸುವುದು.

16) ಜಾತಿ/ಆದಾಯ ಪ್ರಮಾಣ ಪತ್ರ, ಸಣ್ಣ ಮತ್ತು ಅತಿ ಸಣ್ಣ ರೈತರ ಪ್ರಮಾಣ ಪತ್ರ, ಭೂ ಹಿಡುವಳಿ ಪ್ರಮಾಣ ಪತ್ರ, ಭೂ ರಹಿತ ಪ್ರಮಾಣ ಪತ್ರ ಇತ್ಯಾದಿಗಳ ಸೇವೆಗಳನ್ನು ಕೋರಿ ಬರುವ ಅರ್ಜಿಗಳ ವಿಲೇವಾರಿಯ ಅಧಿಕಾರವನ್ನು ಉಪ ತಹಶೀಲ್ದಾರರಿಗೆ ನೀಡಬಹುದಾಗಿರುತ್ತದೆ.

17) ಸಿಬ್ಬಂದಿ ಕೊರತೆ ಮತ್ತು ಸಿಬ್ಬಂದಿಯ ಅಸಮತೋಲನ ಹಂಚಿಕೆಯನ್ನು ಸರಿಪಡಿಸಬೇಕಾಗಿರುತ್ತದೆ.

18) ಜೀವಂತ ಕುಟುಂಬ ಸದಸ್ಯರ ದೃಢೀಕರಣ ಪತ್ರ, ದಡೂತಿ ಪ್ರಮಾಣ ಪತ್ರ ಸೇವೆಗಳನ್ನು ಕೋರಿ ಬರುವ ಅರ್ಜಿಗಳ ಸಮಯವನ್ನು ಹೆಚ್ಚು ಮಾಡಬಹುದಾಗಿರುತ್ತದೆ.

## ದಿನಾಂಕ 11.11.2013 ಮುಖ್ಯ ಮಂತ್ರಿಗಳ ಜನತ ದರ್ಶನ ಕಾರ್ಯಕ್ರಮದಲ್ಲಿ ದೂರುಗಳ ನಿರ್ವಹಣೆಯಲ್ಲಿ ಸಕಾಲ ತಂಡ:



ಜನತಾ ದರ್ಶನದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ನಾಗರಿಕರ ಕುಂದುಕೊರತೆಗಳನ್ನು ಆಲಿಸುತ್ತಿರುವುದು



*ಸಿ.ಎಂ. ಜನತಾ ದರ್ಶನದಲ್ಲಿ ನಾಗರಿಕರ ದೂರುಗಳ ಅರ್ಜಿಗಳನ್ನು ನೇರವಾಗಿ ಇ ಜನಸ್ಪಂದನ ತಂತ್ರಾಂಶದಲ್ಲಿ ನಮೂದಿಸುತ್ತಿರುವ ಸಿಬ್ಬಂದಿಗಳು*

## ಶಿಕ್ಷಣ ಇಲಾಖೆಯ ಸಿಬ್ಬಂದಿಗಳಿಗೆ ಸಕಾಲದ ಬಗ್ಗೆ ತರಬೇತಿ ಕಾರ್ಯಕ್ರಮ – ಉಡುಪಿ:



*ಉಡುಪಿ ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಕರಾದ ಶ್ರೀ ಹರ್ಷ 'ಸಕಾಲ'ದ ಬಗ್ಗೆ ಶಿಕ್ಷಣ ಇಲಾಖೆಯ ಸಿಬ್ಬಂದಿಗಳಿಗೆ ತಿಳಿಸುತ್ತಿರುವ ದೃಶ್ಯ*

*ದಿನಾಂಕ: 17–11–2013 ಶ್ರೀ ರಜನಿ ರಾಘವೇಂದ್ರ, ಐ ಐ ಎಂ – ಬೆಂಗಳೂರು ಅವರೊಂದಿಗೆ ಮಾಯನ್‌ಮ್ಹಾರ್ ವಿಶ್ವ ವಿದ್ಯಾನಿಲಯದಿಂದ ಕೇಂದ್ರಿಯ ಸಾರ್ವಜನಿಕ ನೀತಿಯಲ್ಲಿ ಡಾಕ್ಟರೇಟ್ ಅಭ್ಯಸಿಸುತ್ತಿರುವ 22 ವಿದ್ಯಾರ್ಥಿಗಳು ಬಹುಮಹಡಿ ಕಟ್ಟಡ ಬೆಂಗಳೂರಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವವರು ಆಡಳಿತದ ಕಾಲು ದಾರಿಯನ್ನು*

*ಎಂಬ ವಿಷಯವನ್ನು ಅರ್ಥೈಸಿಕೊಳ್ಳಲು ಆಗಮಿಸಿದ್ದರು. ವಿದ್ಯಾರ್ಥಿಗಳ ಅಂತರ್ ರಾಷ್ಟ್ರೀಯ ಪ್ರವಾಸ ವಿದ್ಯಾಭ್ಯಾಸದ ಭಾಗವಾಗಿರುವ ಈ ಅಧ್ಯಾಯನದಲ್ಲಿ ಭಾರತದಲ್ಲಿ ಸಾಮಾಜಿಕ, ಆರ್ಥಿಕ ಹಾಗೂ ವಾಣಿಜ್ಯ ವಾತಾವರಣ ವಿಷಯ ಕುರಿತಂತೆ ಅಭ್ಯಸಿಸುವ ಸಲುವಾಗಿ ವಿದ್ಯಾರ್ಥಿಗಳ ತಂಡ ಇಲ್ಲಿ ಆಗಮಿಸಿತ್ತು.*




*ಈ ಯೋಜನೆಯ ಸಂಪೂರ್ಣ ಅಳವಡಿಕೆ ಹಾಗೂ ಅನುಷ್ಠಾನ ಇತರೆ ಮಾಹಿತಿಗಾಗಿ ವಿದ್ಯಾರ್ಥಿಗಳು ಬಹಳ ಆಸಕ್ತರಾಗಿದ್ದರು, ಆದುದರಿಂದ ನಿಗದಿತ ಸಮಯಕ್ಕಿಂತ ಹೆಚ್ಚಿನ ಸಮಯದವರೆಗೆ ಸಂಪೂರ್ಣ ಮಾಹಿತಿಯನ್ನು ಅಂದರೆ ದೊಡ್ಡ ತಂಡದ ತರಬೇತಿ ಆಯೋಜಿಸಿದ್ದರ ಬಗ್ಗೆ, ಹಲವಾರು ಇಲಾಖೆಗಳಿಗೆ ಹೇಗೆ ಇದರಲ್ಲಿ ಪ್ರವೃತ್ತರಾಗುವಂತೆ ಮಾಡಿದ ಕಾರ್ಯ ವೈಖರಿ ಬಗ್ಗೆ, ಕರ್ನಾಟಕ ರಾಜ್ಯವನ್ನು ಬಿಟ್ಟು ಬೇರ್‍ಯಾವ ರಾಜ್ಯಗಳು ದೇಶದಲ್ಲಿ ಈ ಅಧಿನಿಯಮವನ್ನು ಅಳವಡಿಸಿಕೊಂಡಿವೆ, ಇತರೆ ವಿಷಯಗಳನ್ನು ಸಕಾಲ ನಿರ್ದೇಶಕರು ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಕಾರ್ಯದರ್ಶಿಗಳಾದ ಡಾ॥ ಶಾಲಿನಿ ರಜನೀಶ್‌ರವರಿಂದ ಹಾಗೂ ಮಂಡಳಿಯ ಇತರೆ ಅಧಿಕಾರಿಗಳ ಮುಖಾಂತರ ತಿಳಿದುಕೊಂಡಿತು. ಹಾಗೆಯೇ ಮಂಡಳಿಯ ನಿರ್ದೇಶಕರು ಹೇಗೆ ಸರಕಾರವು ನಾಗರಿಕರು ಸೇವೆಗಳನ್ನು ನಾಗರಿಕ ಸ್ನೇಹಿ ಕ್ರಮದಲ್ಲಿ ಒದಗಿಸುತ್ತಿದೆ. ದಾಖಲೆಗಳಿಲ್ಲದ ಸಮಯದಲ್ಲಿ ಏನು ಹೇಗೆ ತಮ್ಮ ಕಾರ್ಯಗಳನ್ನು ದೊರಕಿಸಕೊಳ್ಳಬಹುದು ಹಾಗೂ ನಿರಂತರ ಮೇಲ್ವಿಚಾರಣೆ ಅತ್ಯಗತ್ಯ ಎಂಬುದರ ಬಗ್ಗೆ ವಿದ್ಯಾರ್ಥಿಗಳಿಗೆ ಒತ್ತಿ ಹೇಳಿದರು.*


*ತಂಡದಲ್ಲಿ ಇದ್ದ ವಿದ್ಯಾರ್ಥಿಗಳ ಅಧ್ಯಯನ ವಿಷಯವು ಹಲವಾರು ಬಗೆಗಳದ್ದಾಗಿತ್ತು ಉದಾಹರಣೆಗೆ ವೈದ್ಯಕೀಯ, ವಾಣಿಜ್ಯ, ಇಂಜಿನಿಯರ್‌ಗಳು ಇತರೆ. ವಿದ್ಯಾರ್ಥಿಗಳನ್ನು ಭೂಮಿ ಕೇಂದ್ರಕ್ಕೂ ಕರೆದೊಯ್ಯಲಾಯಿತು ಹೇಗೆ ಅಲ್ಲಿ ಕಾರ್ಯ ವೈಖರಿಗಳ ಕ್ರಮವನ್ನು ವಿವರಿಸಲಾಯಿತು. ಮೇಲೆಲ್ಲ ತಿಳಿಸಿರುವ ವಿಷಯ ಅಧ್ಯಾಯನದ ಸಲುವಾಗಿ ಈ ವಿದ್ಯಾರ್ಥಿಗಳು ಈ ತಿಂಗಳ 17ರಿಂದ 30ರವರೆಗೆ ತಂಗುವಾರು.*

## ***<u>ಕೆ ಜಿ ಎಸ್ ಟಿ ಐ ತರಬೇತಿ (ದಿನಾಂಕ: 23.11.2013):</u>***

*ಸಚಿವಾಲಯದ ಅಧಿಕಾರಿಗಳಿಗೆ 'ಸಕಾಲ' ಆನ್‌ಲೈನ್ ಸೇವೆಗಳ  ಬಗ್ಗೆ ತರಬೇತಿ ಕಾರ್ಯಕ್ರಮ*




*ಬೆಂಗಳೂರು ಗ್ರಾಮಾಂತರ ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರಾದ ಶ್ರೀ ಪವನ್ ವರರು ಸಚಿವಾಲಯದ ಸಿಬ್ಬಂದಿಗಳಿಗೆ ತರಬೇತಿ ನೀಡುತ್ತಿರುವ ದೃಶ್ಯ*



*ದಿನಾಂಕ 25.11.2013 ಹಾಗೂ 26.11.2013: ಚಂಡಿಗಡದಲ್ಲಿ ಭಾರತ ಸರ್ಕಾರದ ಸಿಬ್ಬಂದಿ ಹಾಗೂ ಆಡಳಿತ ಸುಧಾರಣೆ ಇಲಾಖೆಯವರು  12 ಉತ್ತರ ಭಾರತದ ರಾಜ್ಯಗಳಿಗೆ ಆಯೋಜಿಸಿದ್ದ  ರಾಷ್ಟ್ರೀಯ ಮಟ್ಟದ ತರಬೇತಿ ಕಾರ್ಯಗಾರದಲ್ಲಿ ಸಕಾಲ ಮಂಡಳಿಯ ನಿರ್ದೇಶಕರು 'ಸಕಾಲ'ದ ಬಗ್ಗೆ ಸಭೆಗೆ ವಿವರಿಸುತ್ತಿರುವುದು. ವಿಷಯ 'ಉತ್ತರದಾಯಿತ್ವ' ಎಂಬ ಬಗ್ಗೆ ನಿರ್ದೇಶಕರು ಸಭೆಗೆ ವಿಸ್ತೃತವಾಗಿ ವಿವರಿಸಿದರು*




***<u>ಸೈಂಟ್ ಜೋಸೆಫ್ ವಿದ್ಯಾರ್ಥಿಗಳೊಂದಿಗೆ ಸಕಾಲದ ಕ್ಷಣಗಳು:</u>***

*ದಿನಾಂಕ 29–11–2013 ರಂದು ಸೈಂಟ್ ಜೋಸೆಫ್ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗವು ಸಕಾಲ ಸೇವೆಗಳ ಅಧಿನಿಯಮದ ಬಗ್ಗೆ ಅಧಿವೇಶನವೊಂದನ್ನು ಸಂಘಟಿಸಿತು.  ರಾಜ್ಯಶಾಸ್ತ್ರ ವಿದ್ಯಾರ್ಥಿಗಳು ಸರ್ಕಾರದ ಬಗ್ಗೆ, ಆಡಳಿತದ ಬಗ್ಗೆ, ಅಭ್ಯಸಿಸಿದ್ದರೂ, ಇಷ್ಟೊಂದು ಸಮೀಪದಿಂದ ಸರ್ಕಾರದ ಕಾರ್ಯವೈಖರಿಯನ್ನು ಅರಿಯುವ ಅವಕಾಶ ಒದಗಿರಲಿಲ್ಲ. ಅಜ್ಞರ್ ಎಂಬ ವಿದ್ಯಾರ್ಥಿ ತಾಲ್ಲೂಕು ಕಛೇರಿಯಿಂದ ಆದಾಯ ಪ್ರಮಾಣ ಪತ್ರ ಪಡೆಯುವಲ್ಲಿ ಇರುವ ಆಡಚಣೆಯನ್ನು ತಿಳಿಸಿದರು.  ಸಕಾಲ ಸೇವೆಗಳನ್ನು ಸೂಚಿಸುವ ಫಲಕವನ್ನು ನೋಡಿರುವಿರಾ, ಎಂದಿದ್ದಕ್ಕೆ ಹೌದು ಎಂದರು. ನೀವು ಸ್ವೀಕೃತಿ ಪತ್ರವನ್ನು ಪಡೆದುಕೊಂಡಿರಾ ಎಂದು ಕೇಳಿದ್ದಕ್ಕೆ ಇಲ್ಲ ಎಂದರು. ನಾನು ಪುನ: ಸಕಾಲದ ಫಲಕದಲ್ಲಿ ಸ್ವೀಕೃತಿಯನ್ನು ಪಡೆದುಕೊಳ್ಳುವಂತೆ ಬರೆದಿಲ್ಲವೆ? ಅಥವಾ ನಾಗರೀಕರಿಗೆ ತಮ್ಮ ದೂರುಗಳನ್ನು ನೊಂದಾಯಿಸಲು ಕರೆ ಕೇಂದ್ರದ ಸಂಖ್ಯೆ  080–44554455 ಅಲ್ಲಿ ಗೋಚರಿಸಲಿಲ್ಲವೇ? ಎಂದು ಕೇಳಿದಾಗ, ಇದಕ್ಕೆ ವಿದ್ಯಾರ್ಥಿಯು 'ಗಮನಿಸಿದೆ' ಎಂದ.*

*ಆದರೆ ಅವನು ಈ ರೀತಿ ಕ್ರಮವಹಿಸಿಲ್ಲ! ಏತಕ್ಕಾಗಿ? ಎಂಬ ಪ್ರಶ್ನೆಗೆ ಅವನ ಬಳಿ ಉತ್ತರವಿಲ್ಲ.*



*ವಿದ್ಯಾವಂತ ಯುವಕರು ಈ ರೀತಿ ತಮ್ಮ ಹಕ್ಕುಗಳನ್ನು ಚಲಾಯಿಸಲು ವಿಫಲರಾದರೆ, ಇತರ ಅಶಿಕ್ಷಿತ ನಾಗರಿಕರಿಂದ ನಾವು ಏನನ್ನು ನೀರಿಕ್ಷಿಸಬಹುದು? ಸಂವಿಧಾನದಲ್ಲಿ ನಾಗರಿಕರಿಗೆ ಮೂಲಭೂತ ಹಕ್ಕುಗಳನ್ನು ನೀಡಲಾಗಿರುವ ಬಗ್ಗೆ ನಾವು ಓದಿರುತ್ತೇವೆ. ಆದರೆ ನಾಗರಿಕರಾಗಿ ನಮ್ಮ ಕರ್ತವ್ಯದ ಬಗ್ಗೆ ನಾವು ಉತ್ಸುಕರಾಗಿಲ್ಲ. ಪ್ರತಿಯೊಬ್ಬರು ನಾಗರಿಕರಿಗೆ ನೀಡಲಾಗಿರುವ ಅಧಿಕಾರವನ್ನು ಬಳಸಿಕೊಂಡರೆ ಸಕಾಲದಡಿ ನೆಲೆ ನಿಂತಿರುವ ವ್ಯವಸ್ಥೆಯು ಎಲ್ಲೆಲ್ಲಿ ಕೊರತೆಗಳಿವೆಯೋ ಅಲ್ಲೆಲ್ಲಾ ತನ್ನಿಂತಾನೇ ಸರಿಪಡಿಸಿಕೊಳ್ಳಲು ನಿರ್ಭಂದಿತವಾಗುವುದು. ಸರ್ಕಾರಿ ನೌಕರರು ಏತಕ್ಕೆ ಉದ್ಧಟತನ ಹಾಗೂ ವಿನಯವಿಲ್ಲದವರಂತೆ ವರ್ತಿಸುತ್ತಾರೆ ಎಂದು ಇನ್ನೋರ್ವ ವಿದ್ಯಾರ್ಥಿ ಪ್ರಶ್ನಿಸಿದ. "ಅವರು ಕುರ್ಚಿಯಲ್ಲಿ ಇಲ್ಲದೆ ಇದ್ದಾಗ ಆ ತರಹ ಇರಲಾರರು" ಎಂದೆ, ಅಧಿಕಾರವು ನಮ್ಮ ವರ್ತನೆಯ ಮೇಲೆ ಪ್ರಭಾವ ಬೀರುತ್ತದೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಹಾಗೂ ಸರ್ಕಾರಿ ನೌಕರರ ಸಂಘಗಳು ಸಿಬ್ಬಂದಿಗಳ ಮನೋಭಾವ ಪರಿವರ್ತನೆಯಲ್ಲಿ ದೂರಗಾಮಿ ಪ್ರಯತ್ನಗಳನ್ನು ಮಾಡುತ್ತಿದ್ದರೆ...... ಹಳೆಯ ರೂಢಿಗಳು ಬದಲಾವಣೆಗೆ ಸಮಯ ತಗಲುತ್ತದೆ. ಪ್ರಾಯಶ: ಈ ನಿಟ್ಟಿನಲ್ಲಿ ಹೆಚ್ಚು ಸೈಬರ್ ಕೆಫೆಗಳನ್ನು ಸ್ಥಾಪಿಸಿ, ಸೇವೆಗಳನ್ನು ಆನ್‌ಲೈನ್‌ನಲ್ಲಿ ಸೇರಿಸುತ್ತಾ ನಾವು ಅವರ ಕೈಯಲ್ಲಿರುವ ಅಧಿಕಾರದ ಹಿಡಿತವನ್ನು ಕಡಿಮೆ ಮಾಡುತ್ತಿದ್ದೇವೆ.*

Phone : 080-22354784
e-mail: ksgeabangalore@rediffmail.com

**ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘ**
**Karnataka State**
**Government Employee's Association**

Post Box No.: 592
Cubbon Park, Bangalore - 560 001

No. GEA..........................
Date -

## *ಟಿಪ್ಪಣಿ*

***ಸಂಸ್ಥೆ***

*ಕರ್ನಾಟಕ ಸರ್ಕಾರಿ ನೌಕರರ ಸಂಘ ಸಹಕಾರಿ ಸಂಘಗಳ ಕಾಯ್ದೆಯಡಿ 1920ರಲ್ಲಿ ನೊಂದವಣಿಯಾಗಿದ್ದು, ಕರ್ನಾಟಕದ 5.60 ಲಕ್ಷ ಸರ್ಕಾರಿ ನೌಕರರನ್ನು ಪ್ರತಿನಿಧಿಸುವ ಸಂಸ್ಥೆಯಾಗಿದೆ. ಈ ಸಂಘವು ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದಿದೆ.*

***ರಚನೆ:***

*ಸಂಘದ ಮುಖ್ಯ ಕಛೇರಿಯು ವಿಧಾನಸೌಧಕ್ಕೆ ಹತ್ತಿರದಲ್ಲಿರುವ ಸ್ವಂತ ಕಟ್ಟಡದಲ್ಲಿದೆ. ಜೊತೆಗೆ ರಾಜ್ಯಾದ್ಯಂತ ಜಿಲ್ಲೆಗಳಲ್ಲಿ ಹಾಗೂ ತಾಲ್ಲೂಕುಗಳಲ್ಲಿ ಒಟ್ಟು 178 ಶಾಖೆಗಳಿರುವುದು. ವಿವಿಧ ಸರ್ಕಾರಿ ಇಲಾಖೆಗಳ ಒಟ್ಟು 2000 ಕೇಡರ್ ಅಸೋಶಿಯೇಷನ್ಗಳು ಸಂಘದ ಸದಸ್ಯತ್ವವನ್ನು ಹೊಂದಿದೆ.*

***ಸಾಮಾಜಿಕ ಜವಾಬ್ದಾರಿ:–*** *ಸಂಸ್ಥೆಯು ಸಾಮಾಜಿಕವಾಗಿ ಕ್ರಿಯಾಶೀಲವಾಗಿದ್ದು ಕೃಷ್ಣ ಮೇಲ್ದಂಡೆ, ನೀರಾವಿ ಯೋಜನೆಗೆ ಸಹಾಯ ಹಸ್ತದ ಮೂಲಕ ರಯತರಿಗೆ ಸಹಾಯ, ಒಡಿಸ್ಸಾದ ನೈಸರ್ಗಿಕ ದುರಂತದಲ್ಲಿ ಪರಿಹಾರ ಕಾರ್ಯ, ಮಹಾರಾಷ್ಟ್ರದ ಲಾತೂರ್ ನಲ್ಲಿ ಸಂಭವಿಸಿದ ಭೂಕಂಪ ಪೀಡಿತರಿಗೆ ಪರಿಹಾರ, ಕರ್ನಾಟಕದ ಬರಪೀಡಿತ ಪ್ರದೇಶಗಳಲ್ಲಿ ಪರಿಹಾರ ಕಾರ್ಯ, ಆದಿಚುಂಚನಗಿರಿ ಮಠದವರು ನಡೆಸುತ್ತಿರುವ ಮೂಕ ಹಾಗೂ ಅಂಧರ ಸಂಸ್ಥೆ, ಮಂಡ್ಯ ಹಾಗೂ ಗುಲ್ಬರ್ಗದಲ್ಲಿರುವ ಕ್ಯಾನ್ಸರ್ ಆಸ್ಪತ್ರೆಗೆ, ಜಾನಪದ ಪ್ರಗತಿಗೆ, ಕನ್ನಡ ಸಾಹಿತ್ತಯ ಪರಿಷತ್ತ ಚಟುವಟಿಕೆಗಳಿಗೆ ಹಾಗೂ ಕಾರ್ಗಿಲ್ ಯುದ್ಧ ಪರಿಹಾರ ನಿದಿ, ಸುನಾಮಿ ದುರಂತ ಪೀಡಿತರ ಪರಿಹಾರ ಚಟುವಟಿಕೆಗಳು ಇತ್ಯಾದಿ.*

*ಯಶಸ್ಸು:*

*ಪಾರದರ್ಶಕತೆ, ಶಿಸ್ತು ಬದ್ಧ ಚಟುವಟಿಕೆಗಳು ಹಾಗೂ ಆಡಳಿತವು ಶ್ರೀ ಎಲ್ ಬೈರಪ್ಪರವರ ಅಧ್ಯಕ್ಷತೆಯಲ್ಲಿ ಸತತ ಮೂರನೇ ಬಾರಿಗೆ ಸಂಘದ ಪದಾಧಿಕಾರಿಗಳನ್ನು ಚುನಾಯಿತರಾಗುವಂತೆ ಮಾಡಿದೆ.*

***ರಾಜ್ಯ ಆಡಳಿತದ ಉತ್ತೇಜನ ಹಾಗೂ ಸರ್ಕಾರದ ಯೋಜನೆಗಳ ಅನುಷ್ಠಾನ:***

*ಸಂಘವು ತನ್ನ 5.60 ಲಕ್ಷ ಸದಸಯರನ್ನೊಳಗೊಂಡು, ಸ್ವಚ್ಛ ಆಡಳಿತ ನೀಡುವಲ್ಲಿ ಹಾಗೂ ಸರ್ಕಾರದ ವಿವಿಧ ಕಲ್ಯಾಣ ಯೋಜನೆಗಳನ್ನು ಅನುಷ್ಟಾನಗೊಳಿಸುವಲ್ಲಿ ಮಹತ್ತರ ಪಾತ್ರವನ್ನು ವಹಿಸಿದೆ, ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಮಾಹಿತಿ ಹಕ್ಕು ಅಧಿನಿಯಮ ಹಾಗೂ ಶಿಕ್ಷಣದ ಹಕ್ಕು ಅಧಿನಿಯಮ ಜಾರಿಗೊಂಡಿರುವುದನ್ನು ವಿಶೇಷವಾಗಿ ಪ್ರಸ್ತಾಪಿಸಬಹುದಾಗಿದೆ.*

*ಸಕಾಲ: ಸಕಾಲದ ಹೆಸರಿನಲ್ಲಿ ಕರ್ನಾಟಕದ ನಾಗರಿಕರಿಗೆ ಸೇವಾ ಖಾತರಿಯ ಅನುಷ್ಟಾನ ಒಂದು ಉಪಯುಕ್ತ ಅಧಿನಿಯಮ. ಈ ಅಧಿನಿಯಮವನ್ನು ರೂಪಿಸುವಲ್ಲಿ ಸಂಘವು ಆರಂಭದಿಂದಲೇ ಆಸಕ್ತಿಯಿಂದ ಭಾಗವಹಿಸುತ್ತಲಿದೆ. ಜೊತೆಗೆ ಸಂಘವು ಸರ್ಕಾರಿ ನೌಕರರಾಗಿರುವ ತನ್ನ ಎಲ್ಲಾ ಸದಸ್ಯರಿಗೂ ಸಕಾಲ ಸೇವೆಗಳ ಅಧಿನಿಯಮವನ್ನು ಸಮರ್ಥವಾಗಿ ಅರ್ಥೈಸಿಕೊಳ್ಳಲು ತರಬೇತಿ ಕಾರ್ಯಾಗಾರವನ್ನು ಸಂಘಟಿಸಿದೆ. ನಾಗರಿಕ ಸೇವೆಯ ಮಹತ್ವವನ್ನು ಮನದಟ್ಟು ಮಾಡಿಕೊಟ್ಟಿದೆ. ರಾಜ್ಯ ಮಟ್ಟದಲ್ಲಿ ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಸೆಮಿನಾರ್ಗಳು, ತರಬೇತಿ ಕಾರ್ಯಾಗಾರಗಳು, ಚಾವಡಿ ಚರ್ಚೆಗಳು ಸರ್ಕಾರಿ ನೌಕರರಲ್ಲಿ ಸೇವಾ ಮನೋಭಾವನೆಯನ್ನು ರೂಡಿಸಕೊಳ್ಳಲು ಸಹಾಯಕವಾಗಿದೆ.*

*ಡಾ॥ ಶಾಲಿನಿ ರಜನೀಶ್, ಭಾಆಸೇ ಇವರ ಪಥ ನಿರ್ಮಾಪಕ ನಾಯಕತ್ವ, ಸಕಾಲದ ಯಶಸ್ಸಿನ ಹಿಂದೆ 'ಬೇರೆ ಯಾರು ಅಲ್ಲ' ಎನ್ನಬಹುದಾದ ಡಾ॥ ಶಾಲಿನಿ ರಜನೀಶ್, ಭಾಆಸೇ ಸರ್ಕಾರದ ಕಾರ್ಯದರ್ಶಿಗಳು, ಸಿಆಸುಇ (ಆಸು) ಮಾನ್ಯ ಮುಖ್ಯ ಮಂತ್ರಿಗಳಿಂದ ಆರಂಭಗೊಂಡು ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಎಲ್ಲಾ ಹಿರಿಯ ಅಧಿಕಾರಿಗಳು ಸಿಬ್ಬಂದಿ ವರ್ಗ ಸಮಸ್ತ ಆಡಳಿತ ವರ್ಗವೂ ಅವರ ಬೆಂಬಲ ನೀಡಿದೆ. ಸಂಘವು ತರಬೇತಿ ಕಾರ್ಯಾಗಾರಗಳನ್ನು ರಾಜ್ಯ ಮಟ್ಟದಲ್ಲಿ ವಿಧಾನಸೌಧ ಹಾಗೂ ಹೊರಗಡೆ ಸಂಘಟಿಸಿದೆ ಜೊತೆಗೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲೂ ತರಬೇತಿ ಕಾರ್ಯಗಾರಗಳನ್ನು ಯೋಜಿಸಲಾಗಿದೆ. ವಿಧಾನಸೌಧದ ಪಶ್ಚಿಮ ದ್ವಾರದಲ್ಲಿ ಸಕಾಲದ ಅರ್ಜಿ ಸ್ವೀಕೃತಿಗಳು ಹಾಗೂ ವಿಲೇವಾರಿಗಳನ್ನು ನಿರಂತರ ಪ್ರದರ್ಶಿಸುತ್ತಿರುವ ಎಲ್ ಇ ಡಿ ಬೋರ್ಡ್ ಆಡಳಿತದಲ್ಲಿ ಪಾರದರ್ಶಕತೆಯ ಸಂಕೇತವನ್ನು ಸೂಚಿಸುತ್ತದೆ. ಡಾ॥ ಶಾಲಿನಿ ರಜನೀಶ್ರವರು ಸರ್ಕಾರದಲ್ಲಿ ಮಂಜೂರಾದ ಹುದ್ದೆಗಳಿಗಿಂತ 1.40 ಲಕ್ಷ ನೌಕರರ ಕೊರತೆಯನ್ನು ಮನಗಂಡಿದ್ದಾರೆ. ನಾಗರಿಕರಿಗೆ ಸಮಯಬದ್ಧ ಸೇವೆಗಳನ್ನು ಸಮರ್ಪಕವಾಗಿ ತಲುಪಿಸುವ ದೃಷ್ಟಿಯಿಂದ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಅವರು ಸೂಕ್ತ ಉಪಕ್ರಮಗಳನ್ನು ಕೈಗೆತ್ತಿಕೊಂಡಿದ್ದಾರೆ.*

*ಯಶಸ್ಸಿನ ಮಜಲುಗಳು: ಘನವೆತ್ತ ರಾಜ್ಯಪಾಲರಾದ ಹೆಚ್ ಆರ್ ಭಾರದ್ವಾಜ್ ರವರ ಬೆಂಬಲ ಮಾನ್ಯ ಮುಖ್ಯ ಮಂತ್ರಿಗಳ ಸಮರ್ಥ ನಾಯಕತ್ವದಲ್ಲಿ ಸರ್ಕಾರದ ದಿಟ್ಟ ರಾಜಕೀಯ ಇಚ್ಛಾ ಶಕ್ತಿ ಡಾ॥ ಶಾಲಿನಿ ರಜನೀಶ್ ರವರ ನಾಯಕ್ತ್ವದಲ್ಲಿ ಸಕಾಲ ತಂಡದ ಕ್ರಿಯಾಶೀಲ ಚಟುವಿಟಿಕೆ ಹಆಗೂ ಸರ್ವ ಸರ್ಕಾರಿ ನೌಕರರ ತುಂಬುಹೃದಯದ ಸಹಕಾರ, ಸಂವರ್ಧನೆಯು ನಾಗರಿಕ ಸೇವಾ ಖಾತರಿಯ ಅನುಷ್ಟಾನದಲ್ಲಿ ಕರ್ನಾಟಕ ರಾಜ್ಯವನ್ನು ನಂ.1 ಆಗಿಸಿದೆ. ಸಕಾಲವು ಕರ್ನಾಟಕದ 6 ಕೋಟಿ ಜನತೆಗೆ ಸುಮಾರು 6 ಲಕ್ಷ ಸರ್ಕಾರಿ ನೌಕರರಿಂದ ತಲುಪುತ್ತಿದೆ.*

*ಎಲ್ ಬೈರಪ್ಪ,*
*ಅಧ್ಯಕ್ಷರು,*
*ಕರ್ನಾಟಕ ರಾಜ್ಯ, ಸರ್ಕಾರಿ ನೌಕರರ ಸಂಘ,*
*ಕಬ್ಬನ್ ಉದ್ಯಾನವನ*
*ಬೆಂಗಳೂರು–1.*

ದಿನಾಂಕ:– 24/11/2013 ರಂದು ಯಳಂದೂರು ತಾಲ್ಲೂಕಿನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭೀವೃದ್ಧಿ ಯೋಜನೆ (ರಿ.), ಒಕ್ಕೂಟಗಳ ಉದ್ಘಾಟನಾ ಸಮಾರಂಭ: ಇವರು ಹಮ್ಮಿಕೊಂಡಿದ್ದ ಕಾರ್ಯಾಕ್ರಮದಲ್ಲಿ ನಿರ್ವಹಕಾರದ ಗಣೇಶ್ ಮತ್ತು ವಿಶ್ವನಾಥ್ ಮೇಲ್ವಚಾರಕರು ಕಾರ್ಯಾಕ್ರಮದಲ್ಲಿ ಸಕಾಲ ಸೇವೆಗಳ ಬಗ್ಗೆ ಮಾಹಿತಿ ನೀಡಲು ಅವಕಾ ಶ ಮಾಡಿಕೊಟ್ಟರು.

ಅಂತೆಯೆ, ಯಳಂದೂರು ತಾಲ್ಲೂಕು ಕಛೇರಿಯಿಂದ ವಿಶ್ವನಾಥ ಎನ್ ರವರು ಮತ್ತು ಕೊಳ್ಳೇಗಾಲ ತಾಲ್ಲೂಕು ಕಛೇರಿಯಿಂದ ಮಹೇಂದ್ರರವರು ಭಾಗವಹಿಸಿ, ಸಕಾಲ ಯೋಜನೆಯ ಬಗ್ಗೆ ಮಾಹಿತಿ ನೀಡಿ ಸಕಾಲ ಭಿತ್ತಿ ಪತ್ರಗಳನ್ನು ಹಂಚಲಾಯಿತು.

ಕಾರ್ಯಕ್ರಮದಲ್ಲಿ ಸುಮಾರು 2000 ಜನರು ಬಾಗವಹಿಸಿದ್ದು ಸಕಾಲ ಸೇವೆಗಳನ್ನು ಪಡೆಯುವ ರೀತಿ ಹಾಗೂ ಸರಿಯಾದ ಸಂದರ್ಭದಲ್ಲಿ ಸೇವೆಗಳು ತಲುಪದಿದ್ದರೆ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕು ಮತ್ತು ಸಹಾಯ ಕೇಂದ್ರದಲ್ಲಿ ಯಾವ ರೀತಿಯ ಸಹಾಯವನ್ನು ಪಡೆಯಬಹುದು ಎಂಬುದನ್ನು ತಿಳಿಸಲಾಯಿತು.



*ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಒಕ್ಕೂಟಗಳ ಉದ್ಘಾಟನೆ ಸಮಾರಂಭದಲ್ಲಿ – ಸಕಾಲ ಯೋಜನೆಯ ಬಗ್ಗೆ ಯಳಂದೂರು ತಾಲ್ಲೂಕಿನ ಸಕಾಲ ನಿರ್ವಾಹಕರಾದ ವಿಶ್ವನಾಥ ಎನ್ ರವರ ಮೂಲಕ ಮಾಹಿತಿ ನೀಡಿದರು ಕಾರ್ಯಕ್ರಮದ ಮತ್ತು ಸಭೆಯಲ್ಲಿ ಸೇರಿರುವ ಜನಸಮೂಹದ ಭಾವಚಿತ್ರ.*

***ಸಕಾಲ ಸಹಾಯವಾಣಿಯ ಮಹಮ್ಮದಗೌಸ ಡಾಲೀಮನವರ, ಸಕಾಲ ಸಹಾಯಕರು, ಗದಗ ಇವರು ಶಿರಹಟ್ಟಿಯ ಅಂಬೇಡ್ಕರ್ ಕಾಲೋನಿಯಲ್ಲಿ ಮಹಿಳಾ ಸ್ವ ಸಹಾಯ ಗುಂಪಿನ ಪದಾಧಿಕಾರಿಗಳ ಜೊತೆ ನಡೆಸಿದ ಸಕಾಲ ಕಾರ್ಯಕ್ರಮದ ಅರಿವಿನ ಕಾರ್ಯಾಗಾರದ ಭಾವಚಿತ್ರಗಳು: ಕರ್ನಾಟಕ ಸಕಾಲ ಸೇವೆಗಳ***

*ಅಧಿನಿಯಮದಡಿ (3)2 ರಂತೆ ಪ್ರತಿ ಅರ್ಜಿಗೂ ಕಡ್ಡಾಯವಾಗಿ ಸ್ವೀಕೃತಿ ಪತ್ರ ಪಡೆಯುವುದರ ಹಾಗೂ ಪರಿಶಿಷ್ಟ ಜಾತಿ ಹಆಗೂ ಪರಿಶಿಷ್ಟ ಪಂಗಡದವರಿಗೆ ಜೀವನ ಪಯಾಂತಕ್ಕೆ ಜಾತಿ ಪ್ರಮಾಣ ಪತ್ರದ ಸೇವೆಯನ್ನು ಸರಕಾರದಿಂದ ಪಡೆಯಬಹುದು ಈ ವಿಷಯಗಳನ್ನೊಳಗೊಂಡ ಹಾಗೂ ಸಕಾಲದ ಎಲ್ಲಾ ಸೇವೆಗಳ ಬಗ್ಗೆ ಹೆಚ್ಚಿನ ಮಾಹಿತಿ ಹಾಗೂ ಸೇವೆಗಳನ್ನು ಪಡೆಯಲೂ ತಹಸಿಲ್ದಾರರ ಕಾರ್ಯಾಲಯ ಶಿರಹಟ್ಟಿ ಸಕಾಲ ಸಹಾಯವಾಣಿ ಕೇಂದ್ರಕ್ಕೆ ಭೇಟಿ ನೀಡಲು ಕೋರಲಾಯಿತು. ಇದರ ಜೊತೆಗೆ ಶಿಕ್ಷಣದ ಅರಿವನ್ನು ಹಾಗೂ ಶಾಲೆಯಿದ ದೂರ ಉಳಿದ ಮಕ್ಕಳಿಗೆ ಶಾಲೆಗೆ ಹೋಗಲು ತಿಳಿ ಹೇಳಲಾಯಿತು.*

*ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾ ಜನರು ಸಕಾಲ ಸೇವೆಗಳ ಬಗ್ಗೆ ಉತ್ತಮವಾದ ಅಭಿಪ್ರಾಯ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಶಿಕ್ಷಣದ ಬಗ್ಗೆ ಅರಿವು ಮೂಡಿಸಿದ್ದಕ್ಕಾಗಿ ಆ ಕಾಲೋನಿಯಲ್ಲಿರುವಂತಹ ಶಿಕ್ಷಕರು ಉತ್ತಮ ಅಭಿಪ್ರಾಯ ವ್ಯಕ್ತಪಡಿಸಿದರು.*



***ಹಾಸನ ಜಿಲ್ಲೆ ಸಕಾಲ ಸಹಾಯಕೇಂದ್ರ – ಬೆಳ್ಳುಪೇಟೆ –ಸಕಲೇಶಪುರ ದಲ್ಲಿ ಹಮ್ಮಿಕೊಂಡಂತಹ ಸಕಾಲದ ಬಗ್ಗೆ ಜಾಗೃತಿ ಕಾರ್ಯಕ್ರಮಗಳ ದೃಶ್ಯ:-***






*ದಿನಾಂಕ 23.11.2013ರಂದು ಚಾಮರಾಜನಗರ ತಾಲ್ಲೂಕು ಕಛೇರಿಯಲ್ಲಿ ಜರುಗಿದ ಪಿಂಚಣಿ ಅದಾಲತ್ ಕಾರ್ಯಕ್ರಮದಲ್ಲಿ ಸಕಾಲ ಸಹಾಯ ಕೇಂದ್ರ ಚಾಮರಾಜನಗರ ಸಕಾಲ ಕಾಯಿದೆ ಜಾಗೃತಿ ಕಾರ್ಯಕ್ರಮವನ್ನು ಸಹ ಹಮ್ಮಿಕೊಂಡಿತ್ತು. ಕಾರ್ಯಕ್ರಮದಲ್ಲಿ ತಹಸಿಲ್ದಾರ್, ನಗರ ಪಾಲಿಕೆ ಸದಸಯರುಗಳು ಹಾಗೂ ಚಾಮರಾಜನಗರ ತಾಲ್ಲೂಕು ಕಚೇರಿಯ ಸಿಬ್ಬಂದಿ ವರ್ಗದವರು ಹಾಗೂ ಚಾಮರಾಜನಗರ ತಾಲ್ಲೂಕಿನ ಸುಮಾರು 200 ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಚಾಮರಾಜನಗರ ತಾಲ್ಲೂಕು ಕಚೇರಿಯ ಸಕಾಲ ಸಹಾಯಕೇಂದ್ರ ರವಿಂದ್ರ ಹಾಗೂ ಜಿಲ್ಲಾ ಆಡಳಿತ ಭವನದ ಸಕಾಲ ಸಹಾಯ ಕೇಂದ್ರದ ನಿರ್ವಹಕರಾದ ದಯಾನಂದ ಬೆಶಿ ರವರು ಕೂಡ ಭಾಗವಹಿಸಿದ್ದರು. ನೆರೆದಿದ್ದ ನಾಗರಿಕರಿಗೆ ಸಕಾಲದ ಬಗ್ಗೆ ಅರಿವು ಮೂಡಿಸಲಾಯಿತು ಮತ್ತು ಸಕಾಲದ ಬಗ್ಗೆ ಮಾಹಿತಿ ನೀಡುವ ಕರ ಪತ್ರಗಳನ್ನು ಹಂಚಲಾಯಿತು*



*ದಿನಾಂಕ: 25.11.2013 – ಚಾಮರಾಜನಗರದ ಸಕಾಲ ಕೇಂದ್ರದ ನಿರ್ವಹಕ ರವೀಂದ್ರರವರು ಹಾಗೂ ಜಿಲ್ಲಾ ಆಡಳಿತ ಕಛೇರಿ ಸಕಾಲ ಸಹಾಯ ನಿರ್ವಹಕರಾದ ದಯಾನಂದ ಬೆಶಿರವರು ಚಾಮರಾಜನಗರ ಟೌನ್ ವ್ಯಾಪ್ತಿಯಲ್ಲಿರುವ ಮುಖ್ಯ ಗ್ರಂಥಾಲಯದಲ್ಲಿ ಸುಮಾರು 150 ಜನರಿಗೆ ಸಕಾಲ ಕಾಯಿದೆ ಬಗ್ಗೆ ಮಾಹಿತಿ ನೀಡಿದರು ಹಾಗೂ ಸಕಾಲದ ಬಗ್ಗೆ ಮಾಹಿತಿ ನೀಡುವ ಕರಪತ್ರಗಳನ್ನು ಹಂಚಿದರು.*



# ಸಕಾಲ ಸಹಾಯವಾಣಿ

ಜಿಲ್ಲಾಧಿಕಾರಿಗಳ ಕಛೇರಿ, ರಜತಾದ್ರಿ, ಮಣಿಪಾಲ, ಉಡುಪಿ ಜಿಲ್ಲೆ– 576 104

"ಬದಲಾವಣೆಗಾಗಿ ಸಕಾಲದೊಂದಿಗೆ ಕೈ ಜೋಡಿಸಿ"

*Phone: 0820-251111, Mob:9844949865,* **Email:** sakalahelpdeskudupi@gmail.com


ಸಕಾಲ/2013–14 ದಿನಾಂಕ : 23.11.2013

## 'ಸಕಾಲ ಅರಿವು' ಕಾರ್ಯದ ವರದಿ

ಉಡುಪಿಯ ತಾಲೂಕು ಆಫೀಸಿಗೆ ಹೋಗಿ ಅಲ್ಲಿ ಬರುವ ನಾಗರೀಕರಿಗೆ ಸಕಾಲದ ಅರಿವನ್ನು ಮೂಡಿಸುವ ಸಲುವಾಗಿ ನಾಗರೀಕರಲ್ಲಿ ಸಕಾಲದ ಬಗ್ಗೆ ಅನುಭವನ್ನು ಕೇಳಿ ಅವರಿಂದ ಮಾಹಿತಿಯನ್ನು ಸಂಗ್ರಹಿಸಿ ಬಂದಿರುತ್ತೇವೆ ಹಾಗೂ ಉಡುಪಿಯ ಸಾರ್ವಜನಿಕ ಶಿಕ್ಷಣ ಇಲಾಖೆಗೆ ಬೇಟಿ ನೀಡಿ ಅಲ್ಲಿನ ಸಿಬ್ಬಂದಿಯಲ್ಲಿ ಮಾಹಿತಿಯನ್ನು ಪಡೆದುಕೊಂಡು ಬಂದಿರುತ್ತೇನೆ.

**ಉಡುಪಿ ತಾಲೂಕು ಆಫೀಸ್ :**

ಇಲ್ಲಿ ಎಂದಿನಂತೆ ಸಕಾಲದ ಅರ್ಜಿಗಳನ್ನು ಪಡೆಯುತ್ತಿದ್ದ ದೃಶ್ಯಗಳು ಕಂಡುಬಂತು, ಜನರು ಈಗ ಸಕಾಲದಲ್ಲಿ ತಮ್ಮ ಸೇವೆಗಳು ಸುಲಭದಲ್ಲಿ ದೊರೆಯುತ್ತಿದೆ, ಹಾಗೂ ಸಮಯದ ಮಿತಿಯಲ್ಲಿ ಸೇವೆಯನ್ನು ಪಡೆಯಬಹುದು ಎಂದು ಹರ್ಷವನ್ನು ವ್ಯಕ್ತಪಡಿಸಿದರು.

